اَلَّذِيْنَ يُنْفِقُوْنَ اَمْوَالَهُمْ بِالَّيْلِ وَالنَّهَارِ سِرًّا وَّعَلَانِيَةً فَلَهُمْ اَجْرُهُمْ عِنْدَ رَبِّهِمْ ۚ وَلَا خَوْفٌ عَلَيْهِمْ وَلَا هُمْ يَحْزَنُوْنَ ۝

ಗೋಪ್ಯವಾಗಿಯೂ ಬಹಿರಂಗವಾಗಿಯೂ ರಾತ್ರಿಯಲ್ಲೂ ಹಗಲಿನಲ್ಲೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು.

# ತಹ್‌ರೀಕ್ ಜದೀದಿನ

## 85ನೇ ವರ್ಷದ ಶುಭಾರಂಭದ ಅನುಗ್ರಹೀತ ಘೋಷಣೆ


**ಹಝ್ರ್‌ರತ್ ಖಲೀಫತುಲ್ ಮಸೀಹ್ ಖ್ವಾಮಿಸ್**

ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್


ಲಂಡನಿನ "ಬೈತುಲ್ ಫುತೂಹ್" ಮಸೀದಿಯಲ್ಲಿ, ನವೆಂಬರ್ 9, 2018ರಂದು ನೀಡಿದ ಜುಮುಅ ಖುತ್‌ಬ


ಪ್ರಕಾಶಕರು: ವಕಾಲತ್ ಮಾಲ್ ತಹ್‌ರೀಕ್ ಜದೀದ್ ಅಂಜುಮನ್ ಅಹ್ಮದಿಯಾ ಭಾರತ, ಖಾದಿಯಾನ್

Kannada Translation of:
FRIDAY SERMON

Delivered by:
Hazrat Khalifatul Masih V[aba]
On 9th November, 2018
At Bait-ul-Futuh Mosque, Morden, London

PUBLISHER:
WAKALAT - E - MAAL TAHREEK - E - JADID
ANJUMAN AHMADIYYA BHARAT, QADIAN

PRINTED AT:
FAZL - E - UMAR PRINTING PRESS, QADIAN - 143516,
DISTT. GURDASPUR, PUNJAB, INDIA

# ಖುತ್ಬ ತಹ್‌ರೀಕ್ ಜದೀದ್ 2018

*

ಪ್ರಕಾಶಕರು:
**ವಕಾಲತೆ ಮಾಲ್ ತಹ್‌ರೀಕ್ ಜದೀದ್ ಅಂಜುಮನ್ ಅಹ್ಮದಿಯಾ,**
ಭಾರತ

بِسۡمِ اللّٰہِ الرَّحۡمٰنِ الرَّحِیۡمِ

# ತಹ್‌ರೀಕ್ ಜದೀದ್ 85ನೇ ವರ್ಷದ ಶುಭಾರಂಭದ ಅನುಗ್ರಹೀತ ಘೋಷನೆ

**ಈ ವರ್ಷ ಜಾಗತಿಕ ಅಹ್ಮದಿಯಾ ಜಮಾಅತಿಗೆ 1,27,93,000 ಸ್ಟೆರ್ಲಿಂಗ್ ಪೌಂಡ್‌ನ ಸಾಂಪತ್ತಿಕ ತ್ಯಾಗವನ್ನು ಮಾಡಲು ಸೌಭಾಗ್ಯ ಲಭಿಸಿದೆ.**

**ಅಹ್ಮದಿಯಾ ಜಮಾಅತ್ ಭಾರತಕ್ಕೆ ಅಲ್ಲಾಹನ ಅನುಗ್ರಹದಿಂದ ಈ ವರ್ಷವೂ ತನ್ನ ವಿಶಿಷ್ಟವಾದ ಸ್ಥಾನವನ್ನು ನೆಲೆನಿಲ್ಲಿಸುವ ಸೌಭಾಗ್ಯ ಲಭಿಸಿದೆ.**

**ದೀನಿಗೆ ಲೌಕಿಕತೆಯ ಮೇಲೆ ಆದ್ಯತೆ ನೀಡುವ ನಿಷ್ಠಾವಂತರ ಧನತ್ಯಾಗದ ವಿಶ್ವಾಸವರ್ಧಕ ಘಟನೆಗಳ ಪ್ರಸ್ತಾಪ.**

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಲಂಡನಿನ 'ಬೈತುಲ್ ಫುತೂಹ್' ಮಸೀದಿಯಲ್ಲಿ 09–11–2018 ರಂದು ನೀಡಿದ ಜುಮುಅ ಖುತ್‌ಬ.**

اَشۡهَدُ اَنۡ لَّا اِلٰهَ اِلَّا اللّٰهُ وَحۡدَهٗ لَا شَرِيۡكَ لَهٗ وَ اَشۡهَدُ اَنَّ مُحَمَّدًا عَبۡدُهٗ وَ رَسُوۡلُهٗ-

اَمَّا بَعۡدُ فَاَعُوۡذُ بِاللّٰهِ مِنَ الشَّيۡطٰنِ الرَّجِيۡمِ- بِسۡمِ اللّٰهِ الرَّحۡمٰنِ الرَّحِيۡمِ [١:١]

اَلۡحَمۡدُ لِلّٰهِ رَبِّ الۡعٰلَمِيۡنَ [١:٢] الرَّحۡمٰنِ الرَّحِيۡمِ [١:٣] مٰلِكِ يَوۡمِ الدِّيۡنِ [١:٤] اِيَّاكَ نَعۡبُدُ وَاِيَّاكَ نَسۡتَعِيۡنُ [١:٥] اِهۡدِنَا الصِّرَاطَ الۡمُسۡتَقِيۡمَ [١:٦] صِرَاطَ الَّذِيۡنَ اَنۡعَمۡتَ عَلَيۡهِمۡ غَيۡرِ الۡمَغۡضُوۡبِ عَلَيۡهِمۡ وَلَا الضَّآلِّيۡنَ [١:٧]

مَثَلُ الَّذِيۡنَ يُنۡفِقُوۡنَ اَمۡوَالَهُمۡ فِيۡ سَبِيۡلِ اللّٰهِ كَمَثَلِ حَبَّةٍ اَنۡۢبَتَتۡ سَبۡعَ سَنَابِلَ فِيۡ كُلِّ سُنۡۢبُلَةٍ مِّائَةُ حَبَّةٍ ؕ وَاللّٰهُ يُضٰعِفُ لِمَنۡ يَّشَآءُ ؕ وَاللّٰهُ وَاسِعٌ عَلِيۡمٌ ـ اَلَّذِيۡنَ يُنۡفِقُوۡنَ اَمۡوَالَهُمۡ فِيۡ سَبِيۡلِ اللّٰهِ ثُمَّ لَا يُتۡبِعُوۡنَ مَآ اَنۡفَقُوۡا مَنًّا وَّلَآ اَذًى ۙ لَّهُمۡ اَجۡرُهُمۡ عِنۡدَ رَبِّهِمۡ ۚ وَلَا خَوۡفٌ عَلَيۡهِمۡ وَلَا هُمۡ يَحۡزَنُوۡنَ (البقرہ ٢٦٢-٢٦٣)

وَمَثَلُ الَّذِيْنَ يُنْفِقُوْنَ اَمْوَالَهُمُ ابْتِغَآءَ مَرْضَاتِ اللّٰهِ وَتَثْبِيْتًا مِّنْ اَنْفُسِهِمْ
كَمَثَلِ جَنَّةٍۭ بِرَبْوَةٍ اَصَابَهَا وَابِلٌ فَاٰتَتْ اُكُلَهَا ضِعْفَيْنِ ۚ فَاِنْ لَّمْ يُصِبْهَا وَابِلٌ فَطَلٌّ ؕ
وَاللّٰهُ بِمَا تَعْمَلُوْنَ بَصِيْرٌ (البقرہ-۲۶۶)

اَلشَّيْطٰنُ يَعِدُكُمُ الْفَقْرَ وَيَاْمُرُكُمْ بِالْفَحْشَآءِ ۚ وَاللّٰهُ يَعِدُكُمْ مَّغْفِرَةً مِّنْهُ وَفَضْلًا ؕ
وَاللّٰهُ وَاسِعٌ عَلِيْمٌ (البقرہ-۲۶۹)

لَيْسَ عَلَيْكَ هُدٰىهُمْ وَلٰكِنَّ اللّٰهَ يَهْدِيْ مَنْ يَّشَآءُ ؕ وَمَا تُنْفِقُوْا مِنْ خَيْرٍ
فَلِاَنْفُسِكُمْ ؕ وَمَا تُنْفِقُوْنَ اِلَّا ابْتِغَآءَ وَجْهِ اللّٰهِ ؕ وَمَا تُنْفِقُوْا مِنْ خَيْرٍ يُّوَفَّ اِلَيْكُمْ
وَاَنْتُمْ لَا تُظْلَمُوْنَ (البقرہ-۲۷۳)

اَلَّذِيْنَ يُنْفِقُوْنَ اَمْوَالَهُمْ بِالَّيْلِ وَالنَّهَارِ سِرًّا وَّعَلَانِيَةً فَلَهُمْ اَجْرُهُمْ عِنْدَ رَبِّهِمْ ۚ
وَلَا خَوْفٌ عَلَيْهِمْ وَلَا هُمْ يَحْزَنُوْنَ (البقرہ-۲۷۵)

ಮಸಲುಲ್ಲಧೀನ ಯುನ್‌ಫಿಖೂನ ಅಮ್‌ವಾಲಹುಮ್ ಫೀ ಸಬೀಲಿಲ್ಲಾಹಿ ಕಮಸಲಿ ಹಬ್ಬತಿನ್ ಅನ್‌ಬತತ್ ಸಬ್‌ಅ ಸನಾಬಿಲ ಫೀ ಕುಲ್ಲಿ ಸುನ್‌ಬುಲತಿನ್ ಮಿಅತು ಹಬ್ಬ. ವಲ್ಲಾಹು ಯುಝಾಯಿಫು ಲಿಮನ್‌ಯಶಾಹು ವಲ್ಲಾಹು ವಾಸಿಉನ್ ಅಲೀಮ್. ಅಲ್ಲಝೀನ ಯುನ್‌ಫಿಖೂನ ಅಮ್‌ವಾಲಹುಮ್ ಫೀಸಬೀಲಿಲ್ಲಾಹಿ ಸುಮ್ಮ ಲಾ ಯುತ್‌ಬಿಊನ ಮಾ ಅನ್‌ಫಖೂ ಮನ್ನನ್ ವಲಾ ಅಝ್ಝನ್ ಲಹುಮ್ ಅಜ್‌ರುಹುಮ್ ಇಂದ ರಬ್ಬಿಹಿಮ್ ವಲಾ ಖೌಫುನ್ ಅಲೈಹಿಮ್ ವಲಾ ಹುಮ್ ಯಹ್‌ಝನೂನ್. (2: 262, 263).

ವ ಮಸಲುಲ್ಲಧೀನ ಯುನ್‌ಫಿಖೂನ ಅಮ್‌ವಾಲಹುಮ್ ಅಬ್‌ತಿಗಾಅ ಮರ್‌ಝಾತಿಲ್ಲಾಹಿ ವ ತಸ್‌ಬೀತನ್ ಮಿನ್ ಅನ್‌ಫುಸಿಹಿಮ್ ಕಮಸಲಿ ಜನ್ನತಿನ್ ಬಿರಬ್‌ವತಿನ್ ಅಸಾಬಹಾ ವಾಬಿಲುನ್ ಫ ಆತತ್ ಉಕುಲಹಾ ಝಿಅ್‌ಫೈನಿ ಫಇನ್ ಲಮ್ ಯುಸಿಬ್‌ಹಾ ವಾಬಿಲುನ್ ಫತಲ್ಲುನ್ ವಲ್ಲಾಹು ಬಿಮಾ ತಅ್‌ಮಲೂನ ಬಸೀರ್. (2: 266).

ಅಶ್ಶೈತಾನು ಯಯಿದುಕುಮುಲ್ ಫಖ್‌ರ ವ ಯಅ್‌ಮುರುಕುಮ್ ಬಿಲ್ ಫಹ್‌ಶಾಹಿ ವಲ್ಲಾಹು ಯಯಿದುಕುಮ್ ಮಗ್‌ಫಿರತನ್ ಮಿನ್‌ಹು ವ ಫಝ್‌ಲನ್ ವಲ್ಲಾಹು ವಾಸಿಉನ್ ಅಲೀಮ್. (2: 269).

**ಲೈಸ ಅಲೈಕ ಹುದಾಹುಮ್ ವಲಾಕಿನ್ನಲ್ಲಾಹ ಯಹ್‌ದೀ ಮನ್ ಯಶಾಉ ವಮಾ ತುನ್‌ಫಿಖೂ ಮಿನ್ ಖೈರಿನ್ ಫಲಿಅನ್‌ಫುಸಿಕುಮ್ ವಮಾ ತುನ್‌ಫಿಖೂನ ಇಲ್ಲಬ್‌ತಿಗಾಅ ವಜ್‌ಹಿಲ್ಲಾಹ್. ವಮಾ ತುನ್‌ಫಿಖೂ ಮಿನ್ ಖೈರಿನ್ ಯುವಫ್ಫ ಇಲೈಕುಮ್ ವ ಅನ್‌ತುಮ್ ಲಾ ತುಝ್‌ಲಮೂನ್.** **(2: 273).**

**ಅಲ್ಲದ್ಧೀನ ಯುನ್‌ಫಿಖೂನ ಅಮ್‌ವಾಲಹುಮ್ ಬಿಲ್ಲೈಲಿ ವನ್ನಹಾರಿ ಸಿರ್‍ರನ್ ವ ಅಲಾನಿಯತನ್ ಫಲಹುಮ್ ಅಜ್‌ರುಹುಮ್ ಇಂದ ರಬ್ಬಿಹಿಮ್ ವಲಾ ಖೌಫುನ್ ಅಲೈಹಿಮ್ ವಲಾ ಹುಮ್ ಯಹ್‌ಝನೂನ್.** **(2: 275).**

ನಾನು ಪಠಿಸಿದ ವಚನಗಳು ಸೂರತುಲ್ ಬಖರದ ವಚನಗಳಾಗಿವೆ. ಅವುಗಳಲ್ಲಿ ಸಂಪತ್ತಿನ ತ್ಯಾಗದ ಬಗ್ಗೆ ಪ್ರಸ್ತಾಪಿಸಲಾಗಿದೆ. ಆರ್ಥಿಕ ಬಲಿದಾನದ ಬಗ್ಗೆ ಅನುಕ್ರಮವಾಗಿ ಈ ವಚನಗಳಲ್ಲಿ ಅಲ್ಲಾಹನು ವಿವರಿಸಿದ್ದಾನೆ. ಈ ವಚನಗಳ ಭಾಷಾಂತರ ಹೀಗೆ:

ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯ ಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ ಪ್ರತಿಯೊಂದು ತೆನೆಯಲ್ಲೂ ನೂರು ಕಾಲುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು, ತಾನಿಚ್ಛಿಸುವವರಿಗೆ (ಇದಕ್ಕಿಂತಲೂ) ಅಧಿಕ ಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ. ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ಖರ್ಚು ಮಾಡಿ, ಆ ಬಳಿಕ ತಾವು ಖರ್ಚುಮಾಡಿದ್ದನ್ನು (ಅದನ್ನು ಪಡೆದವರೊಡನೆ) ಔದಾರ್ಯವಾಗಿ ಬಣ್ಣಿಸದೆಯೂ (ಅವರ ಮನಸ್ಸನ್ನು) ನೋಯಿಸದೆಯೂ ಇರುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಯಾವುದೇ ಭಯವಿಲ್ಲ; ಅವರು ದುಃಖಿಸಲಾರರು. **(2: 262, 263).**

ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಗಳನ್ನು ದೃಢಪಡಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯ ಮಾಡುವವರ ಸ್ಥಿತಿ ಪೀಠಭೂಮಿಯ ಮೇಲಿರುವ ತೋಟದಂತೆ. ಅದರ ಮೇಲೆ ಭಾರೀ ಮಳೆ ಸುರಿದಾಗ ಇಮ್ಮಡಿ ಫಲಗಳು ಉತ್ಪಾದಿಸಲ್ಪಡುತ್ತವೆ. ಸಮೃದ್ಧವಾದ ಮಳೆ ಅದರ ಮೇಲೆ ಬೀಳದಿದ್ದರೆ ಲಘುವಾದ ಮಳೆ ಅದಕ್ಕೆ ಸಾಕಾಗುತ್ತದೆ. ನೀವು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ. **(2: 266).**

ಶೈತಾನನು ನಿಮಗೆ ದಾರಿದ್ರ್ಯದ ಬಗ್ಗೆ ಭಯ ಹುಟ್ಟಿಸಿ ನೀಚ ಕೃತ್ಯಗಳನ್ನು ಮಾಡಲು ನಿಮ್ಮನ್ನು ಪ್ರೇರೇಪಿಸುತ್ತಾನೆ. ಅಲ್ಲಾಹನು ನಿಮಗೆ ತನ್ನಿಂದ ಕ್ಷಮೆ ಮತ್ತು ಅನುಗ್ರಹವನ್ನು ವಾಗ್ದಾನ ಮಾಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ. **(2: 269)**.

ಅವರು ಸತ್ಪಥವನ್ನು ಅನುಸರಿಸುವಂತೆ ಮಾಡುವುದು ನಿನ್ನ ಹೊಣೆಗಾರಿಕೆಯಲ್ಲ. ಆದರೆ ಅಲ್ಲಾಹನು ತಾನಿಚ್ಛಿಸುವವರನ್ನು ಸತ್ಪಥದಲ್ಲಿ ನಡೆಸುತ್ತಾನೆ. (ಅಲ್ಲಾಹನ ಮಾರ್ಗದಲ್ಲಿ) ನೀವು ವೆಚ್ಚ ಮಾಡುವ ಉತ್ತಮ ಸಂಪತ್ತಿನ ಪ್ರತಿಫಲ ನಿಮಗೆಯೇ – ಅಲ್ಲಾಹನ ಸಂತೃಪ್ತಿಗೋಸ್ಕರ ಹೊರತು ನೀವು ವ್ಯಯಿಸುವುದಿಲ್ಲವಷ್ಟೆ. ನೀವು ಖರ್ಚು ಮಾಡಿದ ಉತ್ತಮ ಸಂಪತ್ತನ್ನು ನಿಮಗೆ ಪೂರ್ಣವಾಗಿ ಮರಳಿಸಲಾಗುವುದು; ನಿಮಗೆ ಅನ್ಯಾಯವಾಗಲಾರದು.

**(2: 273)**

(ಅಲ್ಲಾಹನ ಮಾರ್ಗದಲ್ಲಿ) ಗೋಪ್ಯವಾಗಿಯೂ ಬಹಿರಂಗವಾಗಿಯೂ ರಾತ್ರಿಯಲ್ಲೂ ಹಗಲಿನಲ್ಲೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು. ಅವರು ದುಃಖಿತರೂ ಆಗಲಾರದು. **(2: 275)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಾಂಪತ್ತಿಕ ಬಲಿದಾನದ ಬಗ್ಗೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು:

ನೀವು ಅಲ್ಲಾಹನ ಮಾರ್ಗದಲ್ಲಿ ಧನ ವ್ಯಯ ಮಾಡಿರಿ ಎಂದು ಅಲ್ಲಾಹನ ಆಜ್ಞೆ ಪ್ರಕಾರ ನಾನು ಪದೇ ಪದೇ ನಿಮ್ಮೊಂದಿಗೆ ಒತ್ತಿ ಹೇಳುತ್ತಿದ್ದೇನೆ. ಇಸ್ಲಾಮ್ ಅನ್ಯ ಧರ್ಮಗಳಿಂದ ಬೇಟೆಯಾಡಲ್ಪಡುತ್ತಾ ಇದೆ. ಅವರು ಇಸ್ಲಾಮಿನ ಹೆಸರನ್ನೇ ಅಳಿಸಿ ಬಿಡಲು ಆಶಿಸುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಇಸ್ಲಾಮ್ ಧರ್ಮವನ್ನು ಅಭಿವೃದ್ಧಿಗೊಳಿಸಲು ನಾವು ಕಾರ್ಯತತ್ಪರಾಗಬೇಡವೇ. ಅಲ್ಲಾಹನು ಈ ಜಮಾಅತನ್ನು ಇದೇ ಉದ್ದೇಶಕ್ಕೋಸ್ಕರ ಸ್ಥಾಪಿಸಿರುವನು. ಆದುದರಿಂದ ಇಸ್ಲಾಮನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುವುದು ಅಲ್ಲಾಹನ ಆಜ್ಞೆಗಳನ್ನು ಮತ್ತು ಅವನ ಇಚ್ಛೆಯನ್ನು ಈಡೇರಿಸುವುದಕ್ಕೋಸ್ಕರವಾಗಿದೆ. ಅಲ್ಲಾಹನು ಹೀಗೆ ವಾಗ್ದಾನ ಮಾಡಿರುವನು. ಅಲ್ಲಾಹನಿಗೋಸ್ಕರ ಧನ ವ್ಯಯ ಮಾಡುವವನಿಗೆ

> ಕೆಲವು ಪಟ್ಟು ಹೆಚ್ಚಿಗೆ ಅನುಗ್ರಹ ದೊರಕುವುದು ಎಂದು ಅಲ್ಲಾಹನು ಹೇಳಿದ್ದಾನೆ. ಅಂತಹ ವ್ಯಕ್ತಿಗೆ ಇಹಲೋಕದಲ್ಲಿಯೂ ಬಹಳ ಅನುಗ್ರಹ ದೊರಕುವುದು. ಮೃತನಾದ ನಂತರ ಪರಲೋಕದಲ್ಲಿ ಸಹ ತನ್ನ ತ್ಯಾಗದ ಪ್ರತಿಫಲ ನೋಡುವನು. ತನಗೆ ಎಷ್ಟು ಸುಖ ಸಮೃದ್ಧಿ ಲಭಿಸಿದೆ ಎಂದು ಕಾಣುವನು. **(ಮಲ್‌ಫೂಝಾತ್ ಸಂಪುಟ 8, ಪುಟ 393,394)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳಿದರು:

> ನಮ್ಮ ಜಮಾಅತಿನ ಬಹಳ ದೊಡ್ಡ ಭಾಗ ಬಡಜನರದ್ದಾಗಿದೆ. ಆದರೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಈ ಜಮಾಅತ್ ಬಡಜನರದ್ದಾಗಿದ್ದರೂ ನಾನು ನೋಡುತ್ತಿರುವುದೇನೆಂದರೆ ಅವರಲ್ಲಿ ಸತ್ಯಸಂಧತೆ ಇದೆ. ಸಹಾನುಭೂತಿ ಇದೆ. ಇಸ್ಲಾಮಿನ ಆವಶ್ಯಕತೆಗಳೇನೆಂದು ಮನವರಿಕೆ ಮಾಡಿಕೊಂಡು ಅವರು ತಮ್ಮ ಶಕ್ತಿಸಾಮರ್ಥ್ಯಗಳಿಗೆ ಅನುಸಾರವಾಗಿ ಇಸ್ಲಾಮಿಗೋಸ್ಕರ ಧನವ್ಯಯ ಮಾಡಲು ಹಿಂಜರಿಯುವುದಿಲ್ಲ. **(ಮಲ್‌ಫೂಝಾತ್ ಸಂಪುಟ 8, ಪುಟ 25)**

ಒಂದು ನೂರ ಮೂವತ್ತು ವರ್ಷಗಳ ಹಿಂದೆ ಈ ಜಮಾಅತ್ ಸ್ಥಾಪಿಸಲ್ಪಟ್ಟಿತ್ತು. ಒಂದು ನೂರ ಮೂವತ್ತು ವರ್ಷಗಳು ದಾಟಿ ಹೋದ ನಂತರ ಈಗಲೂ ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಮತ್ತು ಕೆಲವು ಸಾರಿ ತಮ್ಮ ಶಕ್ತಿ ಸಾಮರ್ಥ್ಯಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಬಲಿದಾನಗಳನ್ನು ಮಾಡುವವರನ್ನು ಈ ಜಮಾಅತಿಗೆ ಅಲ್ಲಾಹನು ನೀಡುತ್ತಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಿವರಿಸಿದ ತ್ಯಾಗದ ಮಟ್ಟವನ್ನು ಅವರು ಪೂರ್ಣಗೊಳಿಸುತ್ತಿದ್ದಾರೆ ಮತ್ತು ಅಲ್ಲಾಹನು ನೀಡಿದ ವಾಗ್ದಾನಗಳ ಪಾಲುಗಳನ್ನು ಗಳಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಸಾಂಪತ್ತಿಕ ತ್ಯಾಗದ ಈ ಉನ್ನತ ಮಟ್ಟ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಸ್ಥಾಪಿಸಿದ ಅಹ್ಮದಿಯಾ ಜಮಾಅತ್‌ನಲ್ಲಿ ಮಾತ್ರ ಕಾಣಲು ಸಿಗುತ್ತದೆ. ಇದಕ್ಕೆ ಸಂಬಂಧಿಸಿ ಕೆಲವು ಉದಾಹರಣೆಗಳನ್ನು ನಾನು ನಿಮ್ಮ ಮುಂದೆ ಇರಿಸುತ್ತೇನೆ. ಲೋಕದ ವಿವಿಧ ದೇಶಗಳಲ್ಲಿರುವ ಅಹ್ಮದಿಯರು ತಾವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ

ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂಬ ತಮ್ಮ ಬೈಅತ್ ಪ್ರತಿಜ್ಞೆ ನೆರವೇರಿಸುತ್ತಾ ತಮ್ಮ ಸಂಪತ್ತನ್ನು ಬಲಿದಾನ ನೀಡಲು ಯಾವಾಗಲೂ ಸಿದ್ಧರಾಗಿರುತ್ತಾರೆ.

ಕೇಮರೂನಿನ ಒಂದು ಘಟನೆಯನ್ನು ಮೊದಲು ವಿವರಿಸುತ್ತೇನೆ. ಅಲ್ಲಿಯ ಮುಅಲ್ಲಿಮ್ ವಿವರಿಸುತ್ತಾರೆ: ನಾವು ವೆಸ್ಟರ್ನ್ ರೀಜನಿನ ಒಂದು ಜಮಾಅತಾದ ಮಾರ್ತಗೆ ತಹ್‌ರೀಕ್ ಜದೀದಿನ ಚಂದಾ ಸಂಬಂಧವಾಗಿ ಹೋದಾಗ ಅಲ್ಲಿಯ ಚೀಫ್ ಸಾಹಾಮ್ ಉಸ್ಮಾನ್ ಸಾಹಿಬರು ಗ್ರಾಮದ ಜನರನ್ನು ಒಟ್ಟುಗೂಡಿಸಿ ಹೀಗೆ ಹೇಳಿದರು: ಜಮಾಅತಿನ ಮುಅಲ್ಲಿಮ್ ಸಾಹಿಬರು ತಹ್‌ರೀಕ್ ಜದೀದ್ ಚಂದಾ ವಸೂಲು ಮಾಡಲು ಬಂದಿರುವರು. ಎಲ್ಲರೂ ಈ ಧನತ್ಯಾಗದಲ್ಲಿ ಭಾಗವಹಿಸಬೇಕು. ಅವರು ಮುಂದುವರಿಸುತ್ತಾ ಹೇಳಿದರು: "ಇಂದಿನಿಂದ ಎರಡು ವರ್ಷಗಳ ಹಿಂದೆ ನಾನು ಒಬ್ಬನೇ ಅಥವಾ ಕೆಲವು ಬಾರಿ ಎರಡು ಮೂರು ಮಂದಿ ನನ್ನೊಂದಿಗೆ ಮಸೀದಿಯಲ್ಲಿ ನಮಾಝಿಗೆ ಬರುತ್ತಿದ್ದರು. ಆದರೆ ಗ್ರಾಮದಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡು ನಾವು ಅದರಲ್ಲಿ ಸೇರಿದ ನಂತರ ನಮ್ಮ ಮಸೀದಿ ನಮಾಝ್ ನಿರ್ವಹಿಸುವವರಿಂದ ತುಂಬುತ್ತಿದೆ. ಕೆಲವು ಬಾರಿ ನಮಾಝ್ ಅನುಷ್ಠಿಸುವವರಿಗೆ ಮಸೀದಿಯೊಳಗೆ ಜಾಗವಿಲ್ಲದ ಕಾರಣ ಮಸೀದಿಯ ಹೊರಗೆ ನಮಾಝ್ ನಿರ್ವಹಿಸಬೇಕಾಗುತ್ತದೆ. ಈ ಸ್ಪಷ್ಟವಾದ ಬದಲಾವಣೆ ಅಹ್ಮದಿಯಾ ಜಮಾಅತ್ ಇಲ್ಲಿ ಸ್ಥಾಪನೆಗೊಂಡ ಕಾರಣದಿಂದ ಮಾತ್ರ ಸಾಧ್ಯವಾಯಿತು. ಆದ್ದರಿಂದ ನಾವು ಜಮಾಅತಿನ ಪ್ರತಿಯೊಂದು ಯೋಜನೆಯಲ್ಲಿ ಭಾಗಿಯಾಗಬೇಕು."

ಅಹ್ಮದಿಯತ್ತಿನ ಕಾರಣದಿಂದ ಇವರ ಆರಾಧನೆಯಲ್ಲಿ ಹಾಗೂ ಇವರ ಧನತ್ಯಾಗದಲ್ಲಿ ವಿಸ್ಮಯಕರವಾದ ಒಂದು ಬದಲಾವಣೆ ಮತ್ತು ವರ್ಧನೆ ಉಂಟಾಗಿದೆ. ಇದು ಆರಾಧನೆಯ ಕಡೆಗೆ ಗಮನ ಕಡಿಮೆಯಿರುವ ಮತ್ತು ಸಾಂಪತ್ತಿಕವಾಗಿ ಉತ್ತಮ ಸ್ಥಿತಿಯಲ್ಲಿ ಇದ್ದು ಕೂಡ ಧನತ್ಯಾಗದ ಕಡೆಗೆ ಗಮನ ಕಡಿಮೆಯಿರುವ ಎಲ್ಲ ಹಳೆಯ ಅಹ್ಮದಿಯರ ಗಮನಸೆಳೆಯುವಂತಹ ಸಂಗತಿಯಾಗಿದೆ.

ಕೇಮರೂನಿನ ಒಬ್ಬ ಮುಅಲ್ಲಿಮ್ ಅಬೂಬಕ್ಕರ್ ವಿವರಿಸುತ್ತಾರೆ:

ಕೇಮರೂನಿನ ಉತ್ತರದಲ್ಲಿ ಇರುವ ಮಾಡೀಬೋ ಎಂಬ ಜಮಾಅತಿಗೆ ಚಂದಾ ತಹ್‌ರೀಕ್ ಜದೀದ್ ವಸೂಲು ಮಾಡಲು ಹೋದೆ. ಮನೆಗಳಿಗೆ ಹೋಗಿ ನವ ಅಹ್ಮದಿಯರನ್ನು ಚಂದಾ ತಹ್‌ರೀಕ್ ಜದೀದಲ್ಲಿ ಭಾಗವಹಿಸಲು ಹೇಳಿದೆ. ಆಗ ಉಸ್ಮಾನ್ ಸಾಹಿಬ್ ಹೇಳಿದರು: "ನೀವು ಹಿಂದಿನ ಸಲ ಚಂದಾ ಬಗ್ಗೆ ಹೇಳಲು ಬಂದಾಗ ನಾನು ಹತ್ತು ಸಾವಿರ ಫ್ರಾಂಕ್ ಸೀಫ ಮತ್ತು ಜೋಳವನ್ನು ನೀಡಲು ನಿಯ್ಯತ್ ಮಾಡಿದ್ದೆ. ಇದರ ಕೆಲವು ದಿನಗಳ ನಂತರ ಕಸ್ಟಮ್ ಡಿಪಾರ್ಟ್‌ಮೆಂಟಿನಲ್ಲಿ ನೌಕರಿಗಾಗಿ ಇಂಟರ್‌ವ್ಯೂ ನೀಡಲು ಹೋಗಲಿರುವುದಾಗಿ ನನ್ನ ಮಗ ಹೇಳಿದನು. ಅದಕ್ಕಾಗಿ ತುಂಬಾ ಹಣದ ಆವಶ್ಯಕತೆ ಇತ್ತು. ನಾನು ನನ್ನ ಮಗನಿಗೆ ಹೇಳಿದೆ ನಾನು ಬಡ ವ್ಯಕ್ತಿ ಮತ್ತು ನನಗೆ ಇಷ್ಟು ಅಧಿಕ ಹಣದ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿಲ್ಲ. ನನ್ನ ಬಳಿ ಹತ್ತು ಸಾವಿರ ಫ್ರಾಂಕ್ ಸೀಫ ಇದೆ. ಅದನ್ನು ತಹ್‌ರೀಕ್ ಜದೀದಿಗೆ ಕೊಡುವುದಾಗಿ ನಾನು ವಾಗ್ದಾನ ಮಾಡಿರುವೆನು. ಆದ್ದರಿಂದ ನೀವು ಹೋಗಿ ನೌಕರಿಗಾಗಿ ಇಂಟರ್‌ವ್ಯೂ ಕೊಡು. ಅಲ್ಲಾಹನ ಸಹಾಯ ನಿನಗೆ ಸಿಗುವುದು. ನಾನು ಆ ಹಣವನ್ನು ತಹ್‌ರೀಕ್ ಜದೀದಿಗೆ ನೀಡಿದೆ. ಅದರ ಕೆಲವು ದಿನಗಳ ನಂತರ ಇಂಟರ್‌ವ್ಯೂನಲ್ಲಿ ಪಾಸ್ ಆಗಿರುವುದಾಗಿ ಮತ್ತು ಬೇಗನೆ ನೌಕರಿ ಲಭಿಸುವುದಾಗಿ ನನ್ನ ಮಗನ ಫೋನ್ ಕರೆ ಬಂತು." ಹೀಗೆ ಬಹಳ ಹಣ ಲಂಚವಾಗಿ ಕೊಡುವವರಿಗೆ ನೌಕರಿ ಸಿಗದೆ, ಅಲ್ಲಾಹನ ಅನುಗ್ರಹದಿಂದ ಅವರ ಪ್ರಾರ್ಥನೆಗಳ, ಸದುದ್ದೇಶ ಮತ್ತು ತ್ಯಾಗದ ಕಾರಣದಿಂದ ಅವರ ಮಗನಿಗೆ ನೌಕರಿ ಸಿಕ್ಕಿತು.

ಗೇಂಬಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: "ನಿಯಾಮಿ ಜಿಲ್ಲೆಯ ಒಂದು ಗ್ರಾಮದಲ್ಲಿ ತಹ್‌ರೀಕ್ ಜದೀದ್ ಸಂಬಂಧವಾಗಿ ಒಂದು ಕಾರ್ಯಕ್ರಮ ಸಂಘಟಿಸಲಾಯಿತು. ಎಲ್ಲ ನವ ಅಹ್ಮದಿಯರು ತಹ್‌ರೀಕ್ ಜದೀದಿನಲ್ಲಿ ಭಾಗಿಯಾಗಬೇಕೆಂದು ಖ಼ಲೀಫತುಲ್ ಮಸೀಹರು ಹೇಳಿರುವುದಾಗಿ ಕಾರ್ಯಕ್ರಮದಲ್ಲಿ ಹೇಳಲಾಯಿತು. ಹೀಗೆ ಅಲ್ಲಿದ್ದ ಎಲ್ಲರು ಚಂದಾ ನೀಡಿದರು. ಕೋಜಾಯೇ ಸಾಹಿಬ ಎಂಬ ಹೆಸರಿನ ಓರ್ವ ಸ್ತ್ರೀಯ ಬಳಿ ಆಗ ಇಪ್ಪತ್ತು ಡಲಾಸಿ ಮಾತ್ರವಿತ್ತು. ಅವರ ಕಷ್ಟಕಾಲದಲ್ಲಿ ಬೇಕಾಗಿ ಬರುವುದು ಎಂಬ ಕಾರಣಕ್ಕಾಗಿ ಅದನ್ನು ಜೋಪಾನವಾಗಿ

ಇಟ್ಟಿದ್ದಳು. ಆದರೆ ಅವಳು ಅದನ್ನು ಚಂದಾ ಆಗಿ ನೀಡಿದಳು. ನಂತರ ಅವಳು ಮನೆಗೆ ತಲುಪಿದಾಗ ಅವಳ ಒಬ್ಬ ಅತಿಥಿ ಅವಳಿಗೆ ಐನ್ನೂರು ಡಿಲಾಸಿ ಕೊಡುಗೆಯಾಗಿ ನೀಡಿದರು. ಅವಳು ಬೆಳಗ್ಗೆ ಪುನಃ ಮಸೀದಿಗೆ ಬಂದು ಐವತ್ತು ಡಿಲಾಸಿ ಚಂದಾ ನೀಡಿದಳು. ಈ ಹಣ ಅವಳಿಗೆ ಕೇವಲ ಚಂದಾದ ಅನುಗ್ರಹದಿಂದ ಬಂದಿದೆ ಎಂದು ಅವಳು ಹೇಳುತ್ತಾಳೆ."

ಮರಳಿ ಕೊಡುವೆನು ಎಂಬ ಅಲ್ಲಾಹನ ವಾಗ್ದಾನವು ಅವರ ವಿಶ್ವಾಸವನ್ನು ವರ್ಧಿಸಲು ಕಾರಣವಾಗುತ್ತಿದೆ. ಅಲ್ಲಾಹನು ಬೇಗನೆ ಮರಳಿಕೊಡುವನು ಎಂಬ ಕಾರಣದಿಂದ ಅವರು ತ್ಯಾಗ ಮಾಡಿರಲಿಲ್ಲ. ಆದರೆ ಅಲ್ಲಾಹನು ಬೇಗನೆ ಅವರಿಗೆ ಅದು ಮರಳಿ ಕೊಟ್ಟನು.

ಬೆನಿನ್ ರೀಜನಿನ ಬೋಹೀಕೋ ಎಂಬ ಜಾಗದ ಮುಬಲ್ಲಿಗ್ ಬರೆಯುತ್ತಾರೆ: ಈ ಪಟ್ಟಣದ ಸೆಕ್ರಟರಿ ಮಾಲ್ ಆಟೋ ರಿಕ್ಷಾ ಚಲಾಯಿಸಿ ಜೀವನ ಸಾಗಿಸುತ್ತಿದ್ದರು. ಆ ಆಟೋ ರಿಕ್ಷಾ ಕದ್ದು ಹೋಯಿತು. ಆಫ್ರಿಕಾದಲ್ಲಿ ಕಳ್ಳತನವಾದ ವಸ್ತು ವಾಪಸ್ಸು ಸಿಗುವುದು ಅಸಾಧ್ಯವಾಧ ಒಂದು ಸಂಗತಿಯಾಗಿದೆ. ಅವರು ಸ್ನೇಹಿತರು ಅವರ ಆಟೋ ರಿಕ್ಷಾ ಕಳೆದುಹೋದ ಬಗ್ಗೆ ತಿಳಿದು ಸಂತಾಪ ಸೂಚಿಸುವಾಗ "ನನಗೆ ಅಲ್ಲಾಹನಲ್ಲಿ ಭರವಸೆ ಇದೆ, ನಾನು ಒಬ್ಬ ಬಡವ, ಈ ಆಟೋ ರಿಕ್ಷಾ ಚಲಾಯಿಸಿ ಜೀವನ ಸಾಗಿಸುತ್ತಿದ್ದೆ ಮತ್ತು ಚಂದಾ ಪಾವತಿಸುತ್ತಿದ್ದೆ. ನನಗಿಂತ ಜಾಸ್ತಿ ಆವಶ್ಯವಿರುವ ಯಾರಿಗೋ ಬೇಕಾಗಿ ಅಲ್ಲಾಹನು ತಾತ್ಕಲಿಕವಾಗಿ ವ್ಯವಸ್ಥೆ ಮಾಡಿರಬಹುದು. ಅವರು ಅವರ ಆವಶ್ಯವನ್ನು ಪೂರ್ತಿಮಾಡಿ ನನಗೆ ನೀಡಬಹುದು." ಅವರಿಗೆ ಅವರ ಆಟೋ ರಿಕ್ಷಾ ಕಳೆದು ಹೋದ ಕಾರಣದಿಂದ ತುಂಬಾ ದುಃಖವಾಗಿ ಮಾನಸಿಕ ಸಮತೋಲನ ತಪ್ಪಿದೆ ಎಂದು ಅವರ ಈ ಮಾತುಗಳನ್ನು ಕೇಳಿ ಜನರು ಭಾವಿಸಿದರು. ಹೇಗಿದ್ದರೂ ಅವರು ಪೊಲೀಸ್ ಸ್ಟೇಷನಿನಲ್ಲಿ ದೂರು ಸಲ್ಲಿಸಿದರು ಮತ್ತು ಆರಾಮವಾಗಿ ಮನೆಯಲ್ಲಿ ಇದ್ದುಬಿಟ್ಟರು. ಎರಡು ವಾರದ ನಂತರ ಅವರ ಆಟೋ ರಿಕ್ಷಾ ನೋಡಿದ್ದಾಗಿಯೂ ಆದರೆ ಅದರ ಬಣ್ಣವನ್ನು ಬದಲಿಸಿದ್ದಾಗಿರುವುದಾಗಿ ತಿಳಿಸುತ್ತಾ ನೆರೆಮನೆಯ ವ್ಯಕ್ತಿಯ ಫೋನ್ ಕರೆ ಬಂತು. ಈ ಬಗ್ಗೆ ಪೊಲೀಸಿಗೆ ತಿಳಿಸಲಾಯತು. ಆಟೋ ರಿಕ್ಷಾದ ಅಸಲು ಡಾಕ್ಯುಮೆಂಟ್‌ಗಳೊಂದಿಗೆ ಸ್ಟೇಶನಿಗೆ ಬರಬೇಕಾಗಿ

ಪೋಲಿಸ್ ಇಬ್ಬರು ಮಾಲಿಕರನ್ನು ಆದೇಶಿಸಿತು. ತನಿಖೆ ನಡೆಸಲಾದಾಗ ಆ ವ್ಯಕ್ತಿಯ ಡೊಕ್ಯುಮೆಂಟ್ಸ್ ನಕಲಿ ಎಂದು ಸಾಬೀತಾಯಿತು. ಆಗ ಎರಡು ದಿನಗಳಲ್ಲಿ ಆಟೋರಿಕ್ಷಾವನ್ನು ರಿಪೇರಿಮಾಡಿ ಮಾಲಿಕನಿಗೆ ವಾಪಸ್ಸು ಕೊಡಬೇಕೆಂದು ಆ ವ್ಯಕ್ತಿಗೆ ಪೋಲಿಸ್ ಆದೇಶಿಸಿತು. ಹೀಗೆ ಅವರ ಆಟೋ ರಿಕ್ಷಾ ಅವರಿಗೆ ವಾಪಸ್ಸು ಸಿಕ್ಕತು. ಅವರು ಆಟೋ ರಿಕ್ಷಾ ಚಲಾಯಿಸಿ ಮಿಶನ್ ಹೌಸಿಗೆ ಬಂದು ಈ ಘಟನೆಯನ್ನು ವಿವರಿಸಿದರು. ಅನಂತರ ಹೇಳಿದರು: "ನನ್ನ ತಹ್‌ರೀಕ್ ಜದೀದ್ ಚಂದಾ ಸಂದಾಯವಾಗಿಲ್ಲ. ನಾನು ಕೆಲಸಕ್ಕಾಗಿ ಹೋಗುತ್ತಿದ್ದೇನೆ. ಈ ವಾರದಲ್ಲಿ ಬರುವ ಲಾಭವನ್ನು ಚಂದಾ ಆಗಿ ನೀಡುವೆನು. ಏಕೆಂದರೆ ಚಂದಾ ಅನುಗ್ರಹದಿಂದಲೇ ನನಗೆ ನನ್ನ ಆಟೋ ರಿಕ್ಷಾ ಮರಳಿ ಲಭಿಸಿದೆ." ಹೀಗೆ ಅವರು ಒಂದು ವಾರದಲ್ಲಿ ಹನ್ನೆರಡು ಸಾವಿರ ಫ್ರಾಂಕ್ ಸೀಫ ಹಣ ಸಂಪಾದಿಸಿ ತಹ್‌ರೀಕ್ ಜದೀದ್ ಚಂದಾ ಸಂದಾಯ ಮಾಡಿದರು. ಇದು ಸಹ ಅಲ್ಲಾಹನ ಮೇಲಿನ ಭರವಸೆ ಮತ್ತು ವಿಶ್ವಾಸದ ವಿಸ್ಮಯಕರವಾದ ಉದಾಹರಣೆಯಾಗಿದೆ.

ಭಾರತದಿಂದ ಇನ್ಸ್‌ಪೆಕ್ಟರ್ ತಹ್‌ರೀಕ್ ಜದೀದ್, ಶಹಾಬ್ ಸಾಹಿಬ್ ಹೀಗೆ ಬರೆಯುತ್ತಾರೆ: ಚಿಂಟಗುಂಟ ಜಮಾಅತಿನ ಒಬ್ಬ ಯುವತಿ ಸೂಫಿಯಾ ಬೇಗಮ್ ತನ್ನ ಸಹೋದರನ ಮೂಲಕ ಹೀಗೆ ತಿಳಿಸಿದ್ದಾಳೆ: "ನಾನು ಚಿಕ್ಕವಳಾಗಿದ್ದಾಗ ನನ್ನ ತಾಯಿಯವರ ಜೊತೆಗೆ ಜಲ್ಸಗಳಿಗೆ ಹೋಗುತ್ತಿದ್ದೆ. ಜಲ್ಸಗಳಲ್ಲಿ ನಮ್ಮ ವಿದ್ವಾಂಸರ ಭಾಷಣಗಳನ್ನು ಆಲಿಸುತ್ತಿದ್ದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದ್ ಚಂದದ ಅಸ್ತಿಭಾರ ಹಾಕಿ ಸಾಂಪತ್ತಿಕ ಬಲಿದಾನವನ್ನು ಆವಶ್ಯಪಟ್ಟಾಗ ಅನೇಕ ಮಹಿಳೆಯರು ತಮ್ಮ ಆಭರಣಗಳನ್ನು ಚಂದವಾಗಿ ನೀಡಿದರು ಎಂಬ ಈಮಾನ್ ವರ್ಧಕ ಸಂಭವಗಳನ್ನು ಆಲಿಸಿದಾಗ ನಾನು ಆಶಿಸಿದೆ, ನನ್ನ ಬಳಿ ಯಾವುದಾದರೂ ಆಭರಣವಿದ್ದರೆ ನಾನು ಸಹ ತಹ್‌ರೀಕ್ ಜದೀದ್ ಚಂದದಲ್ಲಿ ಕೊಡುವೆನು ಎಂದು. ಆದರೆ ಬಡತನದ ಕಾರಣ ನನಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ನನ್ನ ತಾಯಿಯವರು ಮೃತರಾದಾಗ ನನಗೆ ನನ್ನ ವಾರೀಸು ಹಕ್ಕಾಗಿ ಎರಡು ತೊಲೆ ಚಿನ್ನ ದೊರಕಿತು. ನಾನು ಅದನ್ನು ತಹ್‌ರೀಕ್ ಜದೀದ್ ಚಂದವಾಗಿ ನೀಡುತ್ತೇನೆ."

ನಾನು ಕಳೆದ ವಾರ ಅಮೇರಿಕದಲ್ಲಿ ಸಹ ಹೇಳಿದ್ದೆ ಮತ್ತು ಅನೇಕ ಸಾರಿ ಹೇಳಿದ್ದೇನೆ. ಬಡವರು ಸಾಂಪತ್ತಿಕ ತ್ಯಾಗ ಮಾಡುತ್ತಿದ್ದಾರೆ. ಆದರೆ ಶ್ರೀಮಂತರು ಮತ್ತು ಉತ್ತಮ ಸ್ಥಿತಿಯಲ್ಲಿರುವ ಜನರು ತಮ್ಮ ಸ್ಥಿತಿಯನ್ನು ಪರಿಶೋಧಿಸಬೇಕು. ಅವರು ಅಲ್ಲಾಹನು ಅಂಗೀಕರಿಸುವಂತಹ ತ್ಯಾಗದ ಮಟ್ಟವನ್ನು ತಲಪಿರುವರೋ ಎಂದು ನೋಡಬೇಕು.

ಭಾರತದ ಕರ್ನಾಟಕದಿಂದ ಒಬ್ಬ ಇನ್ಸಪೆಕ್ಟರ್ ತಹ್‌ರೀಕ್ ಜದೀದ್ ಬರೆಯುತ್ತಾರೆ: ಒಬ್ಬ ಅಹ್ಮದಿ ತಹ್‌ರೀಕ್ ಜದೀದ್ ಚಂದವಾಗಿ ವಾಗ್ದಾನ ಮಾಡಿದ ಎರಡೂವರೆ ಸಾವಿರ ರೂಪಾಯಿ ಪಾವತಿಸಿರಲಿಲ್ಲ. ಅವರನ್ನು ಕಂಡು ಚಂದ ನೀಡಲು ಅಪೇಕ್ಷಿಸಿದಾಗ ಅವರು ಹೇಳಿದರು: "ಮಳೆಯ ಕಾರಣ ಕಳೆದ ಮೂರು ತಿಂಗಳಿಂದ ನನ್ನ ಕೆಲಸ ನಿಂತು ಹೋಗಿದೆ. ಯಾವುದೇ ಆದಾಯದ ಪ್ರತೀಕ್ಷೆ ಇಲ್ಲ." ನಾನು ಹೇಳಿದೆ: ನೀವು ಚಂದ ನೀಡುವ ಬಗ್ಗೆ ನಿರ್ಧಾರ ಮಾಡಿರಿ ಮತ್ತು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಹೀಗೆ ಹೇಳಿದ ನಂತರ ನಾನು ಅನಂತರ ಹೋಗಬೇಕಾದ ಊರಿಗೆ ಹೋದೆನು. ಸಾಯಂಕಾಲ ನಾನು ಅಲ್ಲಿಂದ ಮರಳಿದಾಗ ಆ ಸ್ನೇಹಿತ ಮಿಶನ್ ಹೌಸಿಗೆ ಬಂದು ಚಂದವನ್ನು ಪೂರ್ಣವಾಗಿ ಪಾವತಿಸಿದರು. ನಾನು ಅವರೊಂದಿಗೆ ಕೇಳಿದೆ ಇದು ಹೇಗೆ ಸಾಧ್ಯವಾಯಿತು. ಇಷ್ಟು ಬೇಗ ಹೇಗೆ ಚಂದ ನೀಡಿದಿರಿ ಎಂದು ಕೇಳಿದೆ. ಅವರು ಹೇಳಿದರು: "ಇದು ನನ್ನ ನಿರ್ಧಾರದ ಅನುಗ್ರಹ ಮತ್ತು ಚಂದ ನೀಡುವುದರ ಅನುಗ್ರಹದಿಂದ ಸಾಧ್ಯವಾಯಿತು. ಒಬ್ಬನು ನನಗೆ ಹಣ ಕೊಡಲಿಕ್ಕಿತ್ತು. ನಾನು ಹಲವು ತಿಂಗಳ ಕಾಲದಿಂದ ಅದನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೆ ಆದರೆ ಆ ವ್ಯಕ್ತಿ ನನಗೆ ಹಣ ಕೊಡಲಿಲ್ಲ. ಈ ದಿನ ಅಚಾನಕವಾಗಿ ಆ ವ್ಯಕ್ತಿ ತಾನೇ ನನ್ನ ಮನೆಗೆ ಬಂದು ನನಗೆ ಕೊಡಬೇಕಾದ ಹಣ ಮರಳಿಸಿದರು."

ತನ್‌ಝ಼ಾನಿಯಾ ಮುಅಲ್ಲಿಮ್ ಮೂಸಾ ಸಾಹಿಬ್ ಬರೆಯುತ್ತಾರೆ: ದಾರುಸ್ಸಲಾಮ್ ಜಮಾಅತಿನ ಒಬ್ಬ ನಿಷ್ಠಾವಂತ ಅಹ್ಮದಿ ಸೋದರ ಇದ್ದಾರೆ. ಅವರು ಜಮಾಅತಿನ ಆಫೀಸಿನಲ್ಲಿ ಸಹ ಕೆಲಸಮಾಡುತ್ತಾರೆ. ರಮಝ಼ಾನಿಗೆ ಮುಂಚಿತವಾಗಿ ತನ್ನ ಮತ್ತು ತನ್ನ ಕುಟುಂಬದ ಚಂದಾವನ್ನು ಸಂದಾಯ ಮಾಡಲು ಅವರು ಎಲ್ಲ ವರ್ಷ ಪ್ರಯತ್ನಿಸುತ್ತಿದ್ದರು. ಆದರೆ ಈ ವರ್ಷ

ಮನೆಯ ಪರಿಸ್ಥಿತಿಯ ಕಾರಣ ಚಂದಾದ ವಾಗ್ದಾನವನ್ನು ಈಡೇರಿಸಲು ಸಾಧ್ಯವಾಗಲಿಲ್ಲ. ಇದರಿಂದ ಅವರು ಚಿಂತಿತರಾಗಿದ್ದರು. ಅಲ್ಲಾಹನು ಸ್ವತಃ ಅವರಿಗೆ ಏನಾದರೂ ಮಾರ್ಗ ತೆರೆಯಲಿ ಎಂದು ಅವರು ಪ್ರಾರ್ಥಿಸಿದರು. ಈದ್ ಹಬ್ಬದ ಸಂದರ್ಭದಲ್ಲಿ ಜಮಾಅತಿನ ಕಾರ್ಯಕರ್ತರಿಗೆ ಈದ್ ಕೊಡುಗೆ ಸಿಗುತ್ತದೆ. ಈದ್ ಕೊಡುಗೆಯಾಗಿ ಸಿಗುವ ಹಣದಿಂದ ಈದಿನ ಆವಶ್ಯಕತೆಗಳನ್ನು ಈಡೇರಿಸುವ ಬದಲಿಗೆ ಚಂದಾ ನೀಡುವುದಾಗಿ ಅವರು ಯೋಚಿಸಿದರು. ಆದರೆ ಅವರು ಲೆಕ್ಕ ಮಾಡಿದಾಗ ಆ ಹಣ ಕೊಟ್ಟರೂ ಅವರ ಚಂದಾ ಪೂರ್ಣವಾಗಿ ಸಂದಾಯ ಮಾಡಲು ಸಾಧ್ಯವಿರಲಿಲ್ಲ. ತನ್ನ ವಾಗ್ದಾನವನ್ನು ಪೂರ್ತಿಮಾಡಲು ಏನಾದರು ಮಾರ್ಗ ತೆರೆಯಲಿ ಎಂದು ಅವರು ಪುನಃ ಪ್ರಾರ್ಥಿಸಿದರು. ಅವರಿಗೆ ಈದ್ ಕೊಡುಗೆ ಲಭಿಸಿದಾಗ ಸಾಧಾರಣವಾಗಿ  ಲಭಿಸುವುದಕ್ಕಿಂತ ಅಧಿಕ ಹಣ ಕೊಡುಗೆಯಾಗಿ ಲಭಿಸಿತು. ಹೀಗೆ ಅವರು ಚಂದಾದ ವಾಗ್ದಾನವನ್ನು ಈಡೇರಿಸಿದರು.

ಮಾಸ್ಕೋದಿಂದ ಮುಬಲ್ಲಿಗ್ ರಿಝ್ವೀ ಸಾಹಬ್ ಬರೆಯುತ್ತಾರೆ: ರಶ್ಯಾದ ಒಂದು ಹಿಂದುಳಿದ ಪ್ರದೇಶವಾದ ಬೋರಿಯತಯ ಎಂಬಲ್ಲಿ ಒಬ್ಬ ನವ ಅಹ್ಮದಿ ವಾದಮ್ ಸಾಹಿಬ್ ಇದ್ದಾರೆ. ಅವರಿಗೆ 2017ರಲ್ಲಿ ಅಹ್ಮದಿಯ ಜಮಾಅತಿನಲ್ಲಿ ಸೇರಲು ಸೌಭಾಗ್ಯ ಲಭಿಸಿತು. ಈ ವರ್ಷ ಮಾರ್ಚ್ ತಿಂಗಳಲ್ಲಿ ಅಹ್ಮದೀ ಸೋದರರನ್ನು ಭೇಟಿಯಾಗಲು, ಶೈಕ್ಷಣಿಕ ಮತ್ತು ತರಬೇತಿ ಪರವಾದ ಪ್ರಯೋಜನ ಪಡೆಯಲು ಒಂದು ವಾರಕ್ಕೆ ಅವರು ಮಾಸ್ಕೋಗೆ ಬಂದಿದ್ದರು. ಅವರು ತುಂಬಾ ಬಡವರಾಗಿದ್ದರು. ಕೆಲವು ಸಂದರ್ಭದಲ್ಲಿ ಬಹಳ ಕಷ್ಟದಾಯಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು. ಅವರು ಮಾಸ್ಕೋದಲ್ಲಿ ಇದ್ದಾಗ ಇಶಾ ನಮಾಝಿನ ನಂತರ ಜಮಾಅತಿನ ಸಾಂಪತ್ತಿಕ ವ್ಯವಸ್ಥೆ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳ ಬಗ್ಗೆ ಹೇಳಲಾಯಿತು. ಅವರ ಕಷ್ಟಕರವಾದ ಪರಿಸ್ಥಿತಿಯ ಕಾರಣ ಅವರು ಐವತ್ತು ರೂಬಲ್ ಕೂಡ ನೀಡಿದರೂ ಮಹಾತ್ಯಾಗವಾಗುತ್ತಿತ್ತು. ಮುಂದಿನ ದಿನ ಬೆಳಗ್ಗೆ ಫಜ್ರ್ ನಮಾಝಿನ ನಂತರ ಅವರು ತಹ್‌ರೀಕ್ ಜದೀದ್ ಮತ್ತು ವಖ್‌ಫೇ ಜದೀದ್ ಚಂದಾ ಆಗಿ ಎರಡು ಸಾವಿರ ರೂಬಲ್ ನೀಡಿದರು. ಇದು ಅವರ ಚಂದಾ ಆಗಿ ಸ್ವೀಕರಿಸಬೇಕೆಂದು ಅವರು ಹೇಳಿದರು. "ನಾನು

ಅಹ್ಮದಿಯಾಗಿ ಒಂದು ವರ್ಷವಾಯಿತು. ಇದಕ್ಕಿಂತ ಮುಂಚೆ ನಾನು ಏಕೆ ಚಂದಾ ನೀಡಿಲ್ಲ ಎಂದು ಹೇಳಿ ಪುನಃ ಪುನಃ ದುಃಖಿಸುತ್ತಿದ್ದರು. ಇದು ಅವರ ಹಿರಿದಾದ ತ್ಯಾಗವಾಗಿತ್ತು.

ಇದಾಗಿದೆ ತ್ಯಾಗದ ಮಟ್ಟ. "ಅವರ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ನೋಡಿ ಅದ್ಭುತವಾಗುತ್ತದೆ" ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದು ಇಂಥವರ ಬಗ್ಗೆಯಾಗಿದೆ.

**(ಮಲ್‌ಫೂಝಾತ್ ಸಂಪುಟ 10, ಪುಟ 334)**

ಮಾಸ್ಕೋದಿಂದಲೇ ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ: ಮಾಸ್ಕೋ ಜಮಾಅತಿನಲ್ಲಿ ಒಬ್ಬ ಮೆಂಬರ್ ಇದ್ದಾರೆ. ಅವರು ಬಹಳ ದೀರ್ಘಕಾಲಗಳಿಂದ ಮಾಸ್ಕೋದ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿದ್ದರು. ಅವರು ಈಗ ಉದ್ಯೋಗ ಮಾಡುತ್ತಿರುವ ಸಂಸ್ಥೆ ಬಗ್ಗೆ ಅವರು ಹೇಳುತ್ತಾರೆ. ಅವರು ಆ ಕೆಲಸಕ್ಕಾಗಿ ಇಂಟರ್‌ವ್ಯೂ ನೀಡಲು ಹೋದಾಗ ಅಲ್ಲಿಯ ಮಾಲಿಕ ಹೇಳಿದನು: "ಇಲ್ಲಿ ಸಂಬಳ ವರ್ಧಿಸಲಾಗುವುದಿಲ್ಲ. ಈಗ ಸಿಗುವ ಸಂಬಳವೇ ಯಾವಾಗಲೂ ಸಿಗುವುದು. ಇದು ನಿಮಗೆ ಸಮಂಜಸವೆಂದು ಎನಿಸದರೆ ಇಲ್ಲಿ ಉದ್ಯೋಗ ಮಾಡಿರಿ." ಹೀಗೆ ಅವರು ಅಲ್ಲಿ ಉದ್ಯೋಗ ಮಾಡಿದರು. ಕೆಲವು ಕಾಲದ ನಂತರ ತಹ್‌ರೀಕ್ ಜದೀದ್ ಮತ್ತು ವಖ್‌ಫೇ ಜದೀದ್ ಚಂದಾದ ಬಗ್ಗೆ ಜಮಾಅತಿನಲ್ಲಿ ಹೇಳಲಾಯಿತು. ಅವರು ನಿಯತವಾಗಿ ಚಂದಾ ನೀಡಲು ಶುರುಮಾಡಿದರು. ಕೆಲವೇ ದಿನಗಳಲ್ಲಿ ಆ ಸಂಸ್ಥೆಯ ವ್ಯವಸ್ಥಾಪಕರು ಅವರ ಸಂಬಳದಲ್ಲಿ ಯಾವುದೇ ಬಾಹ್ಯ ಕಾರಣವಿಲ್ಲದೆ ಐದು ಸಾವಿರ ರೂಬಲ್ ವರ್ಧನೆ ಮಾಡಿದರು. ಇದು ಕೇವಲ ಅಲ್ಲಾಹನ ಮಾರ್ಗದಲ್ಲಿ ಧನತ್ಯಾಗ ಮಾಡಿದ ಕಾರಣದಿಂದ ಮಾತ್ರ ಉಂಟಾಯಿತು. ಲೌಕಿಕವಾದ ಯಾವುದೇ ಕಾರಣವಿರಲು ಸಾಧ್ಯವಿರಲಿಲ್ಲ. ಅವರು ಇದನ್ನು ಅಹ್ಮದಿಯೇತರರಿಗೆ ಹೇಳಲು ಪ್ರಯತ್ನಸುವಾಗ ಅವರಿಗೆ ಅದು ಮನವರಿಕೆ ಆಗುತ್ತಿರಲಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಂಗೀಕರಿಸುವವರು ಇದನ್ನು ಸರಿಯಾಗಿ ಮನವರಿಕೆ ಮಾಡಿರುವರು. ಅಲ್ಲಾಹನು ತನ್ನ ಕೃಪೆಯಿಂದ ಅವನ ಮಾರ್ಗದಲ್ಲಿ ತ್ಯಾಗಮಾಡುವವರಿಗೆ ಯಾವುದೇ ಭೌತಿಕವಾದ ಕಾರಣವಿಲ್ಲದೆ ಅನುಗ್ರಹವನ್ನು ನೀಡುತ್ತಾನೆ.

ಬೆನೀನಿನ ರೀಜನ್ ಅಲಾಡಿನ ಮುಬಲ್ಲಿಗ್ ಸಾಹಿಬ್ ಹೇಳುತ್ತಾರೆ: ಅಲ್ಲಿಯ ಸದರ್ ಸಾಹಿಬರಿಗೆ ತಹ್‌ರೀಕ್ ಜದೀದಿನಲ್ಲಿ ಹೆಚ್ಚಿನ ಧನತ್ಯಾಗ ಮಾಡಬೇಕೆಂದು ಹೇಳಿದಾಗ ಅವರು ಹೆಚ್ಚಿಗೆ ಚಂದಾದ ವಾಗ್ದಾನ ಮಾಡಿದರು. ಆದರೆ ಸದ್ಯದಲ್ಲಿ ಹಣವಿಲ್ಲ ಎಂದು ಹೇಳಿದರು. ಅದರ ನಂತರ ಸದರ್ ಸಾಹಿಬರ ಫೋನ್ ಕರೆ ಬಂತು. ಹತ್ತು ಸಾವಿರ ಫ್ರಾಂಕ್ ಸೀಫ ಚಂದಾ ನೀಡಲಿಕ್ಕಿದೆ ಎಂದು ಹೇಳಿದರು. ಅವರ ಈ ವಾಗ್ದಾನದ ನಂತರ ಅಲ್ಲಾಹನ ಅವರನ್ನು ಅನುಗ್ರಹಿಸಿದನು. ಅವರಿಗೆ ಕೆಲಸ ಸಿಕ್ಕಿತು. ಇದನ್ನು ಪಾವತಿಸಿದ ಕೆಲವು ದಿನಗಳ ನಂತರ ಪುನಃ ಅವರ ಫೋನ್ ಬಂತು. ಅಲ್ಲಾಹನ ಬಹಳ ಅನುಗ್ರಹ ಉಂಟಾಗಿದೆ ಎಂದು ಅವರು ಹೇಳಿದರು. ಬಹಳ ಕೆಲಸಗಳು ಸಿಗುತ್ತಿವೆ ಎಂದು ಹೇಳಿದರು. ಇದು ಕೇವಲ ಅಲ್ಲಾಹನ ಮಾರ್ಗದಲ್ಲಿ ಧನತ್ಯಾಗಮಾಡುವುದರಿಂದ ಆಗುತ್ತಿದೆ ಎಂದು ಹೇಳಿದರು. ಅವರಿಗೆ ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ಹಲವು ಪಟ್ಟು ಅಧಿಕ ಬೇಗನೆ ನೀಡಿದನು

ಮಾಲಿಯಿಂದ ಸೀಗೋ ರೀಜನಿನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಒಂದು ದಿನ ಕುರುಡಿಯಾದ ಒಬ್ಬ ಹೆಂಗಸು ಚಂದಾ ಕಳುಹಿಸಿದರು. ಇನ್ನು ಮುಂದೆ ಪ್ರತಿ ತಿಂಗಳು ತನ್ನ ಚಂದಾವನ್ನು ಮಿಶನಿಗೆ ಕಳುಹಿಸುವುದಾಗಿ ಅವರು ಸಂದೇಶವನ್ನು ಸಹ ಕಳುಹಿಸಿದಳು. ಇದರ ಕಾರಣವನ್ನು ಕೇಳಿದ್ದಾಗ ಅವಳು ಹೇಳಿದಳು: ಕೆಲವರಿಗೆ ಅಲ್ಲಾಹನು ಸ್ವತಃ ಗಮನಹರಿಸಿ ತ್ಯಾಗಮಾಡಿಸುತ್ತಾನೆ ಮತ್ತು ವರ್ಧಿಸಿ ಕೊಡುತ್ತಾನೆ. ಎರಡು ದಿನಗಳ ಹಿಂದೆ ಅವಳು ಒಂದು ಕನಸನ್ನು ಕಂಡಳು. ಅದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಎಬ್ಬಿಸಿ ಚಂದಾ ನೀಡಲು ನಿರ್ದೇಶಿಸಿದರು. ಹೀಗೆ ಮಿಶನ್‌ಹೌಸಿಗೆ ಹೋಗಿ ಐದು ಸಾವಿರ ಸೀಫ ಚಂದಾ ಕೊಡುವುದಾಗಿ ಕನಸಿನಲ್ಲಿ ಕಂಡಳು. ನಂತರ ನಿದ್ದೆಯಿಂದ ಎಚ್ಚೆತ್ತಳು.

ಬುರ್ಕಿನೋ ಫಾಸೋ ದೇಶದ ಮುಬಲ್ಲಿಗ್ ಮುಬಾರಕ್ ಮುನೀರ್ ಸಾಹಿಬ್ ಬರೆಯುತ್ತಾರೆ: ಪೀಕೂ ಜಮಾಅತಿನ ಒಬ್ಬ ನಿಷ್ಠಾವಂತ ಅಹ್ಮದಿ ಅಲ್‌ಹಾಜ್ ಇಬ್ರಾಹೀಮ್ ಸಾಹಿಬರ ಇಬ್ಬರು ಪುತ್ರರು ಸ್ವಲ್ಪ ಕಾಲದಿಂದ

ರೋಗ ಬಾಧಿತರಾಗಿದ್ದರು. ಚಿಕಿತ್ಸೆ ನಡೆಸಿದರೂ ಪ್ರಯೋಜನವಾಗಲಿಲ್ಲ. ಒಂದು ದಿನ ನಮ್ಮ ಮುಅಲ್ಲಿಮ್ ಸಾಹಿಬರು ಅವರೊಂದಿಗೆ ಸಾಂಪತ್ತಿಕ ತ್ಯಾಗ ಮಾಡಲು ಹೇಳಿದಾಗ ಅವರು ತನ್ನ ಶಕ್ತಿಗೆ ಅನುಸಾರವಾಗಿ ಚಂದ ನೀಡಿದರು ಮತ್ತು ಪ್ರಾರ್ಥಿಸಿದರು. "ಹೇ ಅಲ್ಲಾಹ್, ನನ್ನ ತ್ಯಾಗಗಳನ್ನು ಸ್ವೀಕರಿಸು. ನನ್ನ ಮಕ್ಕಳು ಬೇಗನೆ ಆರೋಗ್ಯವಂತರಾಗುವಂತೆ ಮಾಡು." ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ: ಕೆಲವು ದಿನಗಳೊಳಗೆ ಮಕ್ಕಳ ಆರೋಗ್ಯ ಅಲ್ಲಾಹನ ಅನುಗ್ರಹದಿಂದ ಸುಧಾರಿಸಿತು. ಒಬ್ಬ ಹುಡುಗ ಪೂರ್ಣವಾಗಿ ರೋಗವಿಮುಕ್ತನಾದನು. ಇನ್ನೊಬ್ಬನ ಆರೋಗ್ಯ ಸ್ಥಿತಿ ಸಹ ಸಾಕಷ್ಟು ಉತ್ತಮವಾಗಿದೆ. ಇಬ್ರಾಹೀಮ್ ಸಾಹಿಬರು, ಅಲ್ಲಾಹನು ಅವರ ಬಲಿದಾನವನ್ನು ಅಂಗೀಕರಿಸಿ ಈ ಅನುಗ್ರಹ ನೀಡಿದನೆಂದು ದೃಢವಾಗಿ ನಂಬುತ್ತಾರೆ.

ಬೂರ್ಕಿನಾಫಾಸೊದ ಬೂಬೂ ಪಟ್ಟಣದ ಸೆಕ್ರಟರಿ ವಸಿಯ್ಯತ್ ಬರೆಯುತ್ತಾರೆ: "ನಾನು ವಸಿಯ್ಯತ್ ಚಂದಾವನ್ನು ಪ್ರತಿ ತಿಂಗಳು ಸಂದಾಯ ಮಾಡುತ್ತಿದ್ದೆ. ಆದರೆ ತಹ್‌ರೀಕ್ ಜದೀದ್ ಮತ್ತು ವಖ್‌ಫೇ ಜದೀದ್ ಚಂದಾ ಸಂದಾಯ ಮಾಡುವುದರಲ್ಲಿ ಕೆಲವೊಮ್ಮೆ ತಡವಾಗುತ್ತಿತ್ತು. ಒಂದು ಸಲ ಅವರು ಖ಼ಲೀಫತುಲ್ ಮಸೀಹರ ಖು಼ತ್‌ಬ ಕೇಳಿದಾಗ, ಎಲ್ಲ ಚಂದಾವನ್ನು ವರ್ಷ ಮುಗಿಯುರೊಳಗೆ ಸಂದಾಯಮಾಡಲು ಯೋಚಿಸಿದರು. ಚಂದಾ ಸಂದಾಯ ಮಾಡಿದ ನಂತರ ಒಂದು ರಾತ್ರಿ ಕನಸಿನಲ್ಲಿ ಬಿಳಿ ವಸ್ತ್ರಧಾರಿ ಒಬ್ಬ ವ್ಯಕ್ತಿ ಒಂದು ಕೀಲಿಗೈ ನೀಡುತ್ತಿರುವುದಾಗಿ ಕಂಡೆನು. ನನಗೆ ಕನಸಿನ ಅರ್ಥ ಮನವರಿಕೆ ಆಗಲಿಲ್ಲ. ಆದರೆ ಕೆಲವು ದಿನಗಳ ನಂತರ ಹಜ್ಜ್ ಮಾಡಲು ತಯಾರಿ ಮಾಡಲು ಮತ್ತು ಅದರ ಸಂಪೂರ್ಣ ಖರ್ಚನ್ನು ವಹಿಸುವುದಾಗಿ ನನ್ನ ಸಹೋದರನ ಸಂದೇಶ ಬಂತು. ಈ ರೀತಿಯಲ್ಲಿ ಅಲ್ಲಾಹನು ಧನತ್ಯಾಗದ ಕಾರಣದಿಂದ ಹಜ್ಜ್ ಮಾಡಲು ಸೌಭಾಗ್ಯ ನೀಡಿದನು."

ಜರ್ಮನಿಯ ಸೆಕ್ರಿಟರಿ ತಹ್‌ರೀಕ್ ಜದೀದ್ ಬರೆಯುತ್ತಾರೆ: ಬೋಕನ್ ಜಮಾಅತಿನ ಒಬ್ಬ ವ್ಯಕ್ತಿ ತಹ್‌ರೀಕ್ ಜದೀದ್ ಚಂದ ಒಂಬೈನೂರು ಯುರೋ ಹೆಚ್ಚಿಗೆ ನೀಡಿದರು. ಅವರು ಹೇಳಿದರು, "ನಾನು ಚಂದದ

ವಾಗ್ದಾನ ನೀಡಿದ ಮರುದಿನ ನನ್ನ ಕೆಲಸದ ಸ್ಥಳಕ್ಕೆ ಹೋದಾಗ ಮಾಲಿಕರು ಹೇಳಿದರು, ನಾನು ನಿಮ್ಮ ಸಂಬಳ ಒಂದು ನೂರು ಯುರೋ ವರ್ಧಿಸಿದ್ದೇನೆ. ಫೆಬ್ರವರಿಯಿಂದ ಅಕ್ಟೋಬರ್ ತನಕ ಒಂಬೈನೂರು ಯುರೋ ಆಗುತ್ತದೆ. ಅಲ್ಲಾಹನು ಚಂದ ಕೊಡುವ ವ್ಯವಸ್ಥೆ ಮಾಡುವನೆಂದು ನನಗೆ ದೃಢನಂಬಿಕೆ ಇತ್ತು. ಆದರೆ ಇಪ್ಪತ್ತನಾಲ್ಕು ತಾಸುಗಳೊಳಗೆ ಅಲ್ಲಾಹನು ಅದರ ವ್ಯವಸ್ಥೆ ಮಾಡುವನೆಂದು ನನಗೆ ತಿಳಿದಿರಲಿಲ್ಲ.

ಜರ್ಮನಿಯ ಸೆಕ್ರಿಟರಿ ತಹ್‌ರೀಕ್ ಜದೀದ್ ಬರೆಯುತ್ತಾರೆ: ಒಬ್ಬ ಸಹೋದರ ತನ್ನ ಅಸೈಲಮ್ ಕೇಸಿನ ಕಾರಣದಿಂದ ಸಂಕಷ್ಟದಲ್ಲಿದ್ದನು. ಕೆಲವು ದಿನಗಳ ನಂತರ ಆ ಸೋದರ ನನ್ನನ್ನು ಭೇಟಿಯಾದನು. ನಾನು ತಹ್‌ರೀಕ್ ಜದೀದ್ ಚಂದಾದ ಕಡೆಗೆ ಅವರ ಗಮನಹರಿಸಿದ್ದಾಗಿ ಹೇಳಿದ ಕಾರಣ ನೂರು ಯೂರೋ ವಾಗ್ದಾನ ಮಾಡಿದ್ದಾಗಿ ಹೇಳಿದರು. ಆಗ ಅವರ ಬಳಿ ಕೇವಲ ಇಪ್ಪತ್ತು ಯೂರೋ ಇತ್ತು. ಅದನ್ನು ಅವರು ಆಗಲೇ ಪಾವತಿಸಿ ಮನೆಗೆ ಹೋದರು. ಮನೆಗೆ ತಲುಪಿದಾಗ ಅವರಿಗೆ ಅವರು ಹಿಂದೆ ಕೆಲಸಮಾಡುತ್ತಿದ ಕಂಪೆನಿಯಿಂದ ಫೋನ್ ಕರೆ ಬಂತು. ಸ್ವಲ್ಪ ಹಣ ಕೊಡಲಿಕ್ಕೆ ಇದೆ, ಬಂದು ವಸೂಲು ಮಾಡಿ ಎಂದು ಹೇಳಲಾಯಿತು. ಮುನ್ನೂರು ಅಥವಾ ನಾನ್ನೂರು ಯೂರೋ ಲಭಿಸಬಹುದು ಎಂದು ಅವರು ಭಾವಿಸಿದರು. ಆದರೆ ಅದನ್ನು ಲೆಕ್ಕ ಮಾಡದೆ ಜೇಬಿಗೆ ಹಾಕಿದರು. ಮೊದಲು ತಹ್‌ರೀಕ್ ಜದೀದಿನಲ್ಲಿ ಕೊಡಲು ಬಾಕಿಯಿರುವ ಎಂಬತ್ತು ಯೂರೋ ನೀಡಿದ ನಂತರ ಇತರ ಆವಶ್ಯಕತೆಗಳಿಗೆ ಖರ್ಚುಮಾಡಿದರು. ಅದರ ನಂತರವೂ ಕೆಲವು ಹಣ ಬಾಕಿಯಾಯಿತು. ಅನಂತರ ಲೆಕ್ಕಮಾಡಿದಾಗ ಅವರಿಗೆ ಒಂದು ಸಾವಿರ ಯೂರೋ ಲಭಿಸಿದ್ದಾಗಿ ತಿಳಿಯಿತು. ಅವರು ನೂರು ಯೂರೋ ಚಂದಾದ ವಾಗ್ದಾನ ಮಾಡಿದರು, ಅದರ ಬದಲಿಗೆ ಅಲ್ಲಾಹನು ಅವರಿಗೆ ಹತ್ತು ಪಟ್ಟು ಹೆಚ್ಚಿಗೆ ನೀಡಿದನು. ಅವರು ಇಂತಹ ಘಟನೆಗಳನ್ನು ಮೊದಲು ಕೇಳುತ್ತಿದ್ದರು. ಅಲ್ಲಾಹನು ತನ್ನ ದಾಸರೊಂದಿಗೆ ಹೀಗೆ ವರ್ತಿಸುತ್ತಾನೆ ಎಂದು ಭರವಸೆ ಇತ್ತು. ಆದರೆ ಈಗ ಅವರಿಗೆ ಇದರ ಸ್ವಂತ ಅನುಭವವಾಯಿತು.

ಐವರಿಕೋಸ್ಟ್ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಅವರು ತಹ್‌ರೀಕ್

ಜದೀದ್ ಚಂದಕ್ಕೆ ಸಂಬಂಧಿಸಿ ಹೊಸದಾಗಿ ಬೈಅತ್ ಮಾಡಿದ ಜನರ ಒಂದು ಜಮಾಅತ್‌ಗೆ ಹೋದರು. ಅಲ್ಲಿ ತಹ್‌ರೀಕ್ ಜದೀದ್ ಚಂದದ ಮಹತ್ವದ ಬಗ್ಗೆ ಭಾಷಣ ಮಾಡುತ್ತಾ ಎಲ್ಲರೂ ಈ ಚಂದದಲ್ಲಿ ಭಾಗವಹಿಸಬೇಕೆಂದು ಹಝ್ರತ್ ಖಲೀಫತುಲ್ ಮಸೀಹ್ ಉಪದೇಶಿಸಿದ್ದಾರೆ ಎಂದು ಹೇಳಿದರು. ಮರುದಿನ ಫಜರ್ ನಮಾಝ್ ನಂತರ ಜಮಾಅತಿನ ಜನರು ತಂತಮ್ಮ ಶಕ್ತಿಗೆ ಅನುಸಾರವಾಗಿ ಚಂದ ನೀಡಲು ಪ್ರಾರಂಭಿಸಿದರು. ಮಸೀದಿಯ ಇಮಾಮರು ಸಹ ತಮ್ಮ ಪರವಾಗಿ ಮತ್ತು ತಮ್ಮ ಕುಟುಂಬದ ಪರವಾಗಿ ಚಂದ ನೀಡಿದರು. ಅನಂತರ ಇಮಾಮ್ ಸಾಹಿಬರ ಆರು ವರ್ಷ ಪ್ರಾಯದ ಬಾಲಕ ತನ್ನ ತಂದೆಯವರಿಂದ ಒಂದು ನೂರು ಫ್ರಾಂಕ್ ಸೀಫ ಪಡೆದುಕೊಂಡು ಬಂದು “ಇದು ನನ್ನ ಚಂದ” ಎಂದು ಹೇಳಿದನು.

ಈ ಚಿಕ್ಕ ಹುಡುಗನ ವರ್ತನೆ ಕಂಡು ನಮಗೆ ಪ್ರೀತಿ ಉಕ್ಕಿ ಬಂತು. ಚಿಕ್ಕ ವಯಸ್ಸಿನಲ್ಲೂ ಆ ಬಾಲಕನಿಗೆ ಆರ್ಥಿಕ ತ್ಯಾಗದ ಬಗ್ಗೆ ಎಂತಹ ಉತ್ಸಾಹವಿದೆ. ಅಲ್ಲಾಹನು ಹೊಸದಾಗಿ ಬೈಅತ್ ಮಾಡಿದ ಈ ಜನರ ಬಲಿದಾನಗಳನ್ನು ಅಂಗೀಕರಿಸಲಿ. ಅವರಿಗೆ ಲೌಕಿಕ ಮತ್ತು ಆಧ್ಯಾತ್ಮಿಕ ಒಳಿತುಗಳನ್ನು ನೀಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೀಗೆ ಹೇಳಿದ್ದಾರೆ: ಒಂದು ಸಂದರ್ಭದಲ್ಲಿ ಒಬ್ಬ ಮೌಲವಿ ಸಾಹಿಬರು ಮಸೀದಿಯಲ್ಲಿ ಧನತ್ಯಾಗದ ಬಗ್ಗೆ ಭಾಷಣ ನೀಡಿದರು. ಅಲ್ಲಿ ಮೌಲವಿ ಸಾಹಿಬರ ಪತ್ನಿ ಸಹ ಇದ್ದಳು. ಅವಳು ಮೌಲವಿ ಸಾಹಿಬರ ಭಾಷಣದಿಂದ ಪ್ರಭಾವಿತಳಾಗಿ ತನ್ನ ಆಭರಣವನ್ನು ನೀಡಿದಳು. ಮೌಲವಿ ಸಾಹಿಬರ ಹೇಳಿದರು. ಇದು ಜನರಿಗಾಗಿ ಆಗಿದೆ. ನಿನಗಲ್ಲ. ನೀನು ತ್ಯಾಗ ಮಾಡಬೇಡ.

(ಮಲ್‌ಫೂಝಾತ್ ಸಂಪುಟ 6, ಪುಟ 264,265)

ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮಿನ ಜಮಾಅತಿನಲ್ಲಿ ಸ್ವತಃ ಮೌಲವಿ ಸಾಹಿಬರು ಮಾತ್ರವಲ್ಲ, ಅವರ ಮಕ್ಕಳು ಸಹ ಆವೇಶದೊಂದಿಗೆ ಧನತ್ಯಾಗದಲ್ಲಿ ಭಾಗಿವಹಿಸುತ್ತಾರೆ.

ಇಂಡೋನೇಶಿಯಾದಿಂದ ಒಂದು ಉದಾಹರಣೆ ನೋಡಿರಿ. ಅಲ್ಲಿಯ

ಹೆಂಗಸೊಬ್ಬಳು ಬರೆಯುತ್ತಾಳೆ: 2014ರಲ್ಲಿ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಸೇರಿದೆ. ಬೈಅತ್ ಮಾಡಿದ ನಂತರ ನನ್ನ ಕ್ರೈಸ್ತ ಕುಟುಂಬದ ಕಡೆಯಿಂದ ವಿರೋಧ ಶುರುವಾಯಿತು. ನನ್ನನ್ನು ಅವರು ಬೈಯ್ಯುತ್ತಿದ್ದರು. ನನ್ನನ್ನು ನಿಂದಿಸುತ್ತಿದ್ದರು. ನಾನು ಅವರ ಕುಟುಂಬದ ಭಾಗವಲ್ಲವೆಂದು ಅವರು ಭಾವಿಸಲು ತೊಡಗಿದರು. ಆದರೆ ನನಗೆ ಜಮಾಅತಿನಿಂದ ತುಂಬ ಸ್ನೇಹ ಲಭಿಸಿತು. ಒಬ್ಬ ಅಹ್ಮದಿಯೊಂದಿಗೆ ನನ್ನ ನಿಕಾಹ್ ಸಹ ನಡೆಯಿತು. ಕೆಲವು ಕಾಲಗಳ ನಂತರ ಒಂದು ವಾಹನ ಅಪಘಾತದಲ್ಲಿ ನನ್ನ ಗಂಡನ ಕಾಲಿನ ಮೂಳೆಗಳು ಮುರಿದುಹೋಯಿತು. ನಾನು ಆಗ ನಾಲ್ಕು ತಿಂಗಳಿನ ಗರ್ಭಿಣಿಯಾಗಿದ್ದೆ. ಅದೇ ವೇಳೆ ತಹ್‌ರೀಕ್ ಜದೀದಿನ ಹೊಸ ವರ್ಷವೂ ಶುರುವಾಯಿತು. ನಾನು ನನ್ನ ಗಂಡನೊಡನೆ ಚಂದಾದ ವಾಗ್ದಾನ ಕೇಳಿದಾಗ ಅವರು ಬಹಳ ದೃಢನಂಬಿಕೆಯೊಂದಿಗೆ ಐದು ಲಕ್ಷ ಇಂಡೋನೇಶ್ಯನ್ ರೂಪಾಯಿ ವಾಗ್ದಾನ ಬರೆಯಲು ಹೇಳಿದರು. ಮುಂದಿನ ವರ್ಷ ಅವರಿಗೆ ಉದ್ಯೋಗ ಲಭಿಸುವುದಾಗಿ ಹೇಳಿದರು. ಅವರಿಗೆ ಈ ಅವಸ್ಥೆಯಲ್ಲಿ ಉದ್ಯೋಗ ಹೇಗೆ ಸಿಗುವುದು ಎಂದು ಯೋಚಿಸಿ ನಾನು ಅಚ್ಚರಿಪಟ್ಟೆ. ಹೇಗಿದ್ದರೂ ನಾನು ಅವರು ಹೇಳಿದ ಪ್ರಕಾರ ವಾಗ್ದಾನವನ್ನು ಬರೆದೆ. ವರ್ಷ ಮುಕ್ತಾಯವಾಗುತ್ತಾ ಬಂತು. ನನ್ನ ಗಂಡ ಈಗ ನಿರುದ್ಯೋಗಿ ಆಗಿರುವರು. ಚಂದಾ ಹೇಗೆ ಸಂದಾಯ ಮಾಡುವುದು ಎಂದು ಚಿಂತಿತಳಾಗಿದ್ದೆ. ಇದೇ ಅವಸ್ಥೆಯಲ್ಲಿ ದುಆ ಮಾಡಿದಾಗ ಅಲ್ಲಾಹನು ತನ್ನ ಶಕ್ತಿ ಪ್ರಕಟಣೆ ಮಾಡಿದನು. ನನ್ನ ಗಂಡನಿಗೆ ಒಂದು ಪ್ರೈವಟ್ ಕಂಪೆನಿಯಲ್ಲಿ ಉತ್ತಮ ಉದ್ಯೋಗ ಲಭಿಸಿತು. ಹೀಗೆ ನಾವು ನಮ್ಮ ವಾಗ್ದಾನದ ಪ್ರಕಾರ ನೂರು ಪ್ರತಿಶತ ಚಂದಾ ಸಂದಾಯ ಮಾಡಿದೆವು.

ಇಂಡೋನೇಶಿಯಾದಿಂದ ಒಬ್ಬ ಮಹಿಳೆ ವಾರಿದಿ ಸಾಹಿಬ ಬರೆಯುತ್ತಾರೆ: ಕಳೆದ ರಮಝಾನ್ ತಿಂಗಳಲ್ಲಿ ನಮ್ಮ ಕುಟುಂಬ ಒಂದು ಸಂಕಷ್ಟಕ್ಕೆ ಪಾತ್ರವಾಯಿತು. ನನ್ನ ಪತಿಯ ತಂದೆ ರೋಗ ಬಾಧಿತರಾಗಿ ಆಸ್ಪತ್ರೆಗೆ ಪ್ರವೇಶಿಸಲ್ಪಟ್ಟರು. ಒಂದು ತಿಂಗಳ ಕಾಲ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಅವರ ರೋಗದ ಸ್ಥಿತಿ ಬಹಳ ಉಲ್ಬಣಗೊಂಡಾಗ ಅವರನ್ನು ಐಸಿಯುಗೆ ದಾಖಲಿಸಲಾಯಿತು. ಅವರು ಬದುಕಿ ಉಳಿಯುವ

ಪ್ರತೀಕ್ಷೆ ಬಹಳ ಕಡಿಮೆ ಇತ್ತು. ಆ ಮಹಿಳೆಗೆ ತಹ್‌ರೀಕ್ ಜದೀದ್ ಬಗ್ಗೆ ನಾನು ನೀಡಿದ ಖುತ್‌ಬದಲ್ಲಿ ಅದರ ಅನುಗ್ರಹಗಳ ಬಗ್ಗೆ ಹೇಳಿದ್ದು ನೆನಪಿಗೆ ಬಂತು. ಆಗ ಮನೆಯಲ್ಲಿರುವ ಎಲ್ಲರೂ ತಹ್‌ರೀಕ್ ಜದೀದ್ ಚಂದ ಈ ರಮಝಾನಿನಲ್ಲೇ ನೂರು ಶೇಖಡ ಪಾವತಿಸುವೆವು ಎಂದು ತೀರ್ಮಾನಿಸಿದರು. ಅವರೆಲ್ಲರೂ ಅದೇ ರೀತಿ ಚಂದ ಪಾವತಿಸಿದರು ಮತ್ತು ನನಗೂ ಪ್ರಾರ್ಥಿಸಲು ಬರೆದರು. ಆ ಮಹಿಳೆ ಹೇಳುತ್ತಾರೆ: ಅಲ್ಲಾಹನ ಅನುಗ್ರಹದಿಂದ, ಪ್ರಾರ್ಥನೆ ಮತ್ತು ಸಾಂಪತ್ತಿಕ ಬಲಿದಾನಗಳ ಫಲವಾಗಿ ಅವರ ಆರೋಗ್ಯ ಸುಧಾರಣೆಗೊಂಡಿತು. ಕೆಲವು ದಿನಗಳ ನಂತರ ಮನೆಗೆ ಹೋಗಲು ಡಾಕ್ಟರ್ ಅವರಿಗೆ ಅನುಮತಿ ನೀಡಿದರು. ಅವರಿಗೆ ಪೂರ್ಣವಾಗಿ ರೋಗೋಪಶಮನವಾಗಿದೆ ಎಂದು ತಿಳಿದಾಗ ನೆರೆಹೊರೆಯ ಜನರು ಬಹಳ ಆಶ್ಚರ್ಯಗೊಂಡರು. ಕಠಿಣ ರೋಗ ಬಾಧಿತನಾಗಿ ಮೃತ್ಯುವಿನ ಬಾಗಿಲ ತನಕ ತಲಪಿದ ವ್ಯಕ್ತಿ ರೋಗ ನಿವಾರಣೆಗೊಂಡು ಮನೆಗೆ ತಲಪಿದುದಾದರೂ ಹೇಗೆಂದು ಅವರು ಆಶ್ಚರ್ಯಪಟ್ಟರು.

ಯೂ.ಕೆ.ಯ ಬರ್‌ಗಮ್ ಸೆಂಟ್ರಲ್ ಜಮಾಅತಿನ ಸದರ್ ಬರೆಯುತ್ತಾರೆ: ನಾವು ತಹ್‌ರೀಕ್ ಜದೀದಿನ ಟಾರ್ಗಟ್‌ಗಿಂತ ಒಂದು ಸಾವಿರದ ಐನ್ನೂರು ಪೌಂಡ್ ಹಿಂದೆ ಇದ್ದೆವು. ಸಮಯ ಮುಗಿಯಲು ಕೆಲವು ಘಂಟೆಗಳು ಬಾಕಿಯಿದ್ದವು. ಎರಡು ಸಾವಿರದ ನಾನ್ನೂರು ಪೌಂಡ್ ಮೊದಲೇ ನೀಡಿದ್ದ ಒಬ್ಬ ಸಹೋದರ ಒಂದು ಸಾವಿರದ ಐನ್ನೂರು ಪೌಂಡ್ ಹೆಚ್ಚಿಗೆ ನೀಡುತ್ತೇನೆ ಎಂದು ಹೇಳಿದರು. ಅವರು ಆಗ ವಿದೇಶದಲ್ಲಿ ಇದ್ದರು. ಅವರು ಆನ್‌ಲೈನ್ ಮೂಲಕ ಚಂದಾ ನೀಡಿದರು. ಅವರು ಚಂದಾ ನೀಡಿದ ಮರುದಿನವೇ ಟೇಕ್ಸ್ ಡಿಪಾರ್ಟ್‌ಮೆಂಟಿನಿಂದ ಆರು ಸಾವಿರ ಪೌಂಡ್ ವಾಪಸು ಸಿಕ್ಕಿತು. ಅಲ್ಲಾಹನು ಅವರಿಗೆ ನಾಲ್ಕು ಪಟ್ಟು ವರ್ಧಿಸಿ ಕೊಟ್ಟನು.

ಬಡವರ ತ್ಯಾಗ ಹೇಗಿರುತ್ತದೆ. ಅವರೊಂದಿಗೆ ಅಲ್ಲಾಹನ ವಿಸ್ಮಯಕರವಾದ ವರ್ತನೆ ಹೇಗಿರುತ್ತದೆ? ಇದರ ಬಗ್ಗೆ ಬ್ರೋಂಡಿಯ ಮುಅಲ್ಲಿಮ್ ಸಾಹಿಬರು ಬರೆಯುತ್ತಾರೆ: ಕಳೆದ ವರ್ಷ ನಾವು ಒಂದು ಹೊಸ ಜಮಾಅತಾದ ಗಹಾಂಗಕ್ಕೆ ಹೋದೆವು. ಅಲ್ಲಿಯ ಒಬ್ಬ ನವ

ಅಹ್ಮದಿಯಾದ ಮಸ್‌ಊದಿ ಸಾಹಿಬರಿಗೆ ಚಂದಾದ ಪ್ರಾಮುಖ್ಯದ ಬಗ್ಗೆ ಹೇಳಿದೆವು. ಅವರ ಬಳಿ ಈಗ ಏನೂ ಇಲ್ಲ, ಆದರೆ ಅವರ ಮನೆಯ ಅಂಗಳದಲ್ಲಿ ಒಂದು ಫಲದಾಯಕ ಮರವಿದೆ, ಅದರ ಹಣ್ಣುಗಳನ್ನು ಮಾರಿ ಚಂದಾ ನೀಡುತ್ತೇನೆ ಎಂದು ಅವರು ಹೇಳಿದರು. ಅವರು ಒಂದೆರಡು ದಿನಗಳಲ್ಲಿ ಅದರ ಹಣ್ಣುಗಳನ್ನು ಮಾರಿ ಒಂದು ಸಾವಿರ ಬ್ರೋಂಡಿ ಫ್ರಾಂಕ್ ಸಂಪಾದಿಸಿ ಎಲ್ಲವನ್ನು ಚಂದಾ ಆಗಿ ನೀಡಿದರು. ಅವರು ಹಣ್ಣು ಮಾರಿ ಚಂದಾ ನೀಡಿದ ನಂತರ ತುಂಬ ಅನುಗ್ರಹ ಉಂಟಾಗಿದೆ ಎಂದು ಅವರು ಹೇಳುತ್ತಾರೆ. ಈಗ ಈ ಮರದಲ್ಲಿ ಮೊದಲಿಗಿಂತ ಹಲವು ಪಟ್ಟು ಹಣ್ಣು ಆಗುತ್ತಿವೆ ಮತ್ತು ಅವು ನಲ್ವತ್ತು ನಲ್ವತ್ತೈದು ಸಾವಿರ ಬ್ರೋಂಡಿ ಫ್ರಾಂಕಿಗೆ ಮಾರಾಟವಾಗಿದೆ ಎಂದು ಅವರು ಹೇಳುತ್ತಾರೆ.

ಕೋಂಗೋ ಬ್ರಾಝ್‌ವೀಲ್ ದೇಶದ ಮುಅಲ್ಲಿಮ್ ಸಾಹಿಬ್ ಬರೆಯುತ್ತಾರೆ: ಒಬ್ಬ ಅಹ್ಮದಿ ಮುಆವೀಲಿ ಎಂಬವರ ಮಗು ಬಹಳ ದಿನಗಳಿಂದ ರೋಗ ಬಾಧೆಯಿಂದ ಪೀಡಿತವಾಗಿತ್ತು. ಅವರ ಬಳಿಗೆ ಚಂದ ವಸೂಲಿಗೆ ಹೋದಾಗ ಅವರು ಕೂಡಲೆ ಚಂದ ನೀಡಿದರು. ಅದರೊಂದಿಗೆ ಅವರು ಪ್ರಾರ್ಥಿಸಿದರು. ಹೇ ಅಲ್ಲಾಹ್, ಈ ಚಂದದ ಅನುಗ್ರಹದಿಂದ ನನ್ನ ಮಗುವಿಗೆ ರೋಗೋಪಶಮನ ದಯಪಾಲಿಸು. ಅವರು ಹೇಳುತ್ತಾರೆ: ಕೆಲವು ದಿನಗಳೊಳಗೆ ನನ್ನ ಮಗು ಆರೋಗ್ಯವಂತವಾಯಿತು. ನಾನು ಆಶ್ಚರ್ಯಗೊಂಡೆ. ನಮ್ಮ ಅಲ್ಲಾಹ್ ದುಆ ಸ್ವೀಕರಿಸುತ್ತಾನೆ ಮತ್ತು ನಮ್ಮ ಅಲ್ಪಮಾತ್ರವಾದ ತ್ಯಾಗವನ್ನು ಸಹ ಅಂಗೀಕರಿಸುತ್ತಾನೆ.

ಕೆನಡದ ತಹ್‌ರೀಕ್ ಜದೀದ್ ಚಂದದ ಲಜ್ನ ವಿಭಾಗದ ಸೆಕ್ರೆಟರಿ ಬರೆಯುತ್ತಾರೆ: ಒಬ್ಬ ಸಹೋದರಿ ಹೇಳಿದರು, ಅವರ ಪತಿ ತಹ್‌ರೀಕ್ ಜದೀದ್ ಚಂದವಾಗಿ ಒಂದು ಸಾವಿರ ಡಾಲರ್ ನೀಡುವ ವಾಗ್ದಾನ ಮಾಡಿದ್ದರು. ಆದರೆ ಅವರು ಕೆಲವು ಸಮಯದಿಂದ ನಿರುದ್ಯೋಗಿಯಾಗಿದ್ದರು. ಆದುದರಿಂದ ಚಂದ ಪಾವತಿಸಿರಲಿಲ್ಲ. ವರ್ಷ ಮುಕ್ತಾಯವಾಗಲು ಒಂದು ವಾರ ಬಾಕಿಯಾಗಿದ್ದಾಗ ಸೆಕ್ರೆಟರಿ ಸಾಹಿಬರು ಅವರ ಮನೆಗೆ ಹೋದರು. ಆಗ ಅವರು ಮನೆಯೊಳಗೆ ಹೋಗಿ ತನ್ನ ಪತ್ನಿಯೊಂದಿಗೆ ಹೇಳಿದರು: ನನ್ನ ಬಳಿ ಹಣವಿಲ್ಲ ಈಗ ಏನು ಮಾಡುವುದು. ಆಗ ಅವರ ಪತ್ನಿ

ಹೇಳಿದರು ಸೆಕ್ರೆಟರಿ ಸಾಹಿಬರನ್ನು ಬರಿಗೈಯಲ್ಲಿ ಹೋಗಲು ಬಿಡಬಾರದು. ನನ್ನ ಬಳಿ ಶೇಖರಿಸಿಟ್ಟ ಒಂದು ಸಾವಿರ ಡಾಲರ್ ಇದೆ. ಅದನ್ನು ಚಂದ ಆಗಿ ನೀಡೋಣ ಎಂದು ಹೇಳಿ ಆ ಒಂದು ಸಾವಿರ ಡಾಲರ್ ನೀಡಿದರು. ಅವರು ಹೇಳುತ್ತಾರೆ: ಈ ಚಂದ ನೀಡಿದ ಅನುಗ್ರಹದಿಂದ ಅದೇ ವಾರದಲ್ಲಿ ಅವರ ಪತಿಗೆ ಮಾಸಿಕ ಏಳು ಸಾವಿರ ಡಾಲರ್ ಸಂಬಳದ ಉದ್ಯೋಗ ದೊರಕಿತು.

ಅಲ್ಲಾಹನು ದಯಪಾಲಿಸಿದ ಈ ಅನುಗ್ರಹಗಳನ್ನು ವಿವರಿಸಿದ ನಂತರ ತಹ್‌ರೀಕ್ ಜದೀದಿನ ಹೊಸ ವರ್ಷಾರಂಭವನ್ನು ಪ್ರಕಟಿಸುತ್ತಿದ್ದೇನೆ. ಮತ್ತು ಕಳೆದ ವರ್ಷದ ಕೆಲವು ಅಂಕಿ ಅಂಶಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಈ ವರ್ಷ ನವೆಂಬರ್ ದಿನಾಂಕ ಒಂದರಂದು ತಹ್‌ರೀಕ್ ಜದೀದಿನ 85ನೇ ವರ್ಷ ಆರಂಭವಾಗಿದೆ. ಕಳೆದ ವರ್ಷ ಜಮಾಅತಿನ ನಿಷ್ಠಾವಂತರಾದ ಜನರು 12,793 ಮಿಲಿಯನ್ ಪೌಂಡ್ ಚಂದವಾಗಿ ನೀಡುವ ಭಾಗ್ಯ ಅಲ್ಲಾಹನು ನೀಡಿದ್ದಾನೆ. ಎಂದರೆ ಒಂದು ಕೋಟಿ ಇಪ್ಪತ್ತೇಳು ಲಕ್ಷದ ತೊಂಬತ್ತಮೂರು ಸಾವಿರ ಪೌಂಡ್. ಇದು ಕಳೆದ ವರ್ಷ ವಸೂಲಾದ ಚಂದಕ್ಕಿಂತ ಅಲ್ಲಾಹನ ಅನುಗ್ರಹದಿಂದ ಎರಡು ಲಕ್ಷದ ಹನ್ನೆರಡು ಸಾವಿರ ಪೌಂಡ್ ಹೆಚ್ಚಿಗೆ ಇದೆ. ಲೋಕದಲ್ಲಿ ಉತ್ತಮವಲ್ಲದ ಸ್ಥಿತಿ ಇದ್ದರೂ ಅನೇಕ ದೇಶಗಳ ಕರೆನ್ಸಿಯ ಡಿವೇಲ್ಯುವೇಶನ್ ಆಗಿದ್ದರೂ ಅಲ್ಲಾಹನು ನಮಗೆ ಭಾಗ್ಯ ನೀಡಿದನು.

ಚಂದ ಪಾವತಿಯಲ್ಲಿ ಪಾಕಿಸ್ಥಾನ ಮೊದಲನೆ ಸ್ಥಾನದಲ್ಲಿರುತ್ತದೆ. ಅನಂತರ ಪ್ರಥಮ ಸ್ಥಾನ ಜರ್ಮನಿಗೆ ಇದೆ. ಅನಂತರ ಅನುಕ್ರಮವಾಗಿ ಬ್ರಿಟನ್ ಎರಡನೆಯ ಸ್ಥಾನ, ಅಮೇರಿಕ ಮೂರನೆ ಸ್ಥಾನ, ಕೆನಡ ನಾಲ್ಕನೆ ಸ್ಥಾನ, ಭಾರತ ಐದನೆ ಸ್ಥಾನ, ಆಸ್ಟ್ರೇಲಿಯಾ ಆರನೆಯ ಸ್ಥಾನ, ಮಧ್ಯಪೂರ್ವದ ಒಂದು ದೇಶಕ್ಕೆ ಏಳನೆಯ ಸ್ಥಾನ, ಇಂಡೋನೇಶಿಯಾಕ್ಕೆ ಎಂಟನೆ ಸ್ಥಾನ, ಘಾನ ಒಂಬತ್ತನೆಯ ಸ್ಥಾನ, ಹತ್ತನೆಯ ಸ್ಥಾನ ಸಹ ಮಧ್ಯಪೂರ್ವದ ಒಂದು ದೇಶಕ್ಕಿದೆ.

ತಹ್‌ರೀಕ್ ಜದೀದಿನ ದಫ್ತರ್ ಅವ್ವಲ್‌ಗೆ ಸೇರಿದವರ ಖಾತೆ ಸಹ ಅಲ್ಲಾಹನ ಅನುಗ್ರಹದಿಂದ ಜಾರಿಯಲ್ಲಿದೆ. ಅವರ ಸಂಖ್ಯೆ ಐದು

ಸಾವಿರದ ಒಂಬೈನೂರ ಇಪ್ಪತ್ತೇಳು ಆಗಿದೆ. ಭಾರತದಲ್ಲಿ ಹೆಚ್ಚು ತ್ಯಾಗ ಮಾಡಿದ ಹತ್ತು ಜಮಾಅತ್‌ಗಳು ಅನುಕ್ರಮವಾಗಿ ಹೀಗಿವೆ: ಖಾದಿಯಾನ್, ಹೈದರಬಾದ್, ಪತ್ತಪಿರಿಯಂ, ಚೆನ್ನೈ, ಕೋಝಿಕ್ಕೋಡ್, ಬೆಂಗಳೂರು, ಕೊಲ್ಕತ್ತ, ಪಯಂಗಾಡಿ, ಕಣ್ಣೂರ್ ಟೌನ್ ಹಾಗೂ ಯಾದ್‌ಗೀರ್.

ಪ್ರಾಂತ್ಯಗಳ ದೃಷ್ಟಿಯಲ್ಲಿ ಭಾರತದಲ್ಲಿ ಪ್ರಥಮ ಸ್ಥಾನದಲ್ಲಿರುವುದು ಕೇರಳವಾಗಿದೆ. ಅನಂತರ ಕರ್ನಾಟಕ, ತಮಿಳುನಾಡು, ತೆಲಂಗಾಣ, ಜಮ್ಮು ಕಾಶ್ಮೀರ, ಒಡಿಶ, ಪಂಜಾಬ್, ಬಂಗಾಳ, ದೆಹಲಿ ಮತ್ತು ಮಹಾರಾಷ್ಟ್ರ ಸ್ಥಾನಗಳನ್ನು ಹೊಂದಿದೆ.

ಅಲ್ಲಾಹನು ತ್ಯಾಗ ಮಾಡಿದ ಈ ಎಲ್ಲರಿಗೂ ಅವರ ಸಂಪತ್ತಿನಲ್ಲಿಯೂ ಸಂತಾನದಲ್ಲಿಯೂ ಅಪರಿಮಿತವೂ ಅತ್ಯುನ್ನತವೂ ಆದ ಅಭಿವೃದ್ಧಿಯನ್ನು ದಯಪಾಲಿಸಲಿ – ಆಮೀನ್.

–––––––––––––*****––––––––––––––